# ಯಸ್ ಪೇ ಎಪ್ಲಿಕೇಶನ್
# ನಿಯಮ ಮತ್ತು ನಿಬಂಧನೆಗಳು

ಯಸ್ ಪೇ ಎಪ್ಲಿಕೇಶನ್‌ಗಾಗಿ ಈ ಕೆಳಗೆ ನಿರ್ದಿಷ್ಟಪಡಿಸಲಾದ ನಿಯಮ ಮತ್ತು ನಿಬಂಧನೆಗಳು, ಉಪಯೋಗಿಸುವವರು (''**ಉಪಯೋಗಿಸುವವರು**''ಈ ನಿರೂಪಣೆಯು ಅಲ್ಲಿನ ಅರ್ಥ ಅಥವಾ ಸಂದರ್ಭಕ್ಕೆ ಪರಸ್ಪರ ಹೊಂದಿಕೆ ಇರದಿದ್ದರೆ, ಅವರ ವಾರೀಸುದಾರರು ಮತ್ತು ಆಸೈನಿಗಳು ಎಂಬ ಅರ್ಥವನ್ನು ಕೂಡಾ ಹೊಂದಿದೆ ಮತ್ತು ಅವರನ್ನೂ ಒಳಗೊಂಡಿದೆ) ಮತ್ತು ಯಸ್ ಬ್ಯಾಂಕ್ (''**ಯಸ್ ಬ್ಯಾಂಕ್**'', ಈ ನಿರೂಪಣೆಯು ಅಲ್ಲಿ ಅರ್ಥ ಅಥವಾ ಸಂದರ್ಭಕ್ಕೆ ಪರಸ್ಪರ ಹೊಂದಿಕೆ ಇರದಿದ್ದರೆ, ಅವರ ವಾರೀಸುದಾರರು ಮತ್ತು ಅಸೈನಿಗಳು ಎಂಬ ಅರ್ಥವನ್ನು ಕೂಡಾ ಹೊಂದಿದೆ ಮತ್ತು ಅವರನ್ನೂ ಒಳಗೊಂಡಿದೆ)ನ ನಡುವಿನ ಸಂಪೂರ್ಣ ಹಾಗೂ ವಿಶೇಷವಾದ ಒಪ್ಪಂದವಾಗಿದೆ. ಉಪಯೋಗಿಸುವವರನ್ನು ಮತ್ತು ಯಸ್ ಬ್ಯಾಂಕ್‌ನ್ನು ವೈಯಕ್ತಿಕವಾಗಿ ''**ಪಾರ್ಟಿ**'' ಎಂದು ಉಲ್ಲೇಖಿಸಲಾಗುತ್ತದೆ ಮತ್ತು ಜೊತೆಯಾಗಿ ''**ಪಾರ್ಟಿಗಳು**''ಎಂದು ಉಲ್ಲೇಖಿಸಲಾಗುತ್ತದೆ.

ಈ ನಿಯಮಗಳಲ್ಲಿ ಮತ್ತು ನಿಬಂಧನೆಗಳಲ್ಲಿ ತಿದ್ದುಪಡಿ ಮಾಡುವ, ಪರಿವರ್ತಿಸುವ ಅಥವಾ ತೆಗೆದು ಹಾಕುವ ಯಾವುದೇ ಮೌಖಿಕ ಅಥವಾ ಶಾಬ್ದಿಕ ಒಪ್ಪಂದವು, ಇಂತಹ ತಿದ್ದುಪಡಿಗಳನ್ನು, ಪರಿವರ್ತನೆಗಳನ್ನು ಅಥವಾ ತೆಗೆದು ಹಾಕುವುದನ್ನು ಲಿಖಿತ ಮೂಲಕ ಎರಡೂ ಪಾರ್ಟಿಗಳು ದೃಢೀಕರಿಸದಿದ್ದರೆ ಮತ್ತು ಒಪ್ಪಿಕೊಳ್ಳದಿದ್ದರೆ, ಇವು ಊರ್ಜಿತವಾಗುವುದಿಲ್ಲ.

ಈ ನಿಯಮ ಮತ್ತು ನಿಬಂಧನೆಗಳು ಯಸ್ ಬ್ಯಾಂಕ್‌ನಿಂದ ನೀಡಲಾಗುವ ಯಾವುದೇ ಖಾತೆ ಅಥವಾ ಇತರ ಸೌಲಭ್ಯ ಅಥವಾ ಸೇವೆಗಳ ಇತರ ನಿಯಮ ಮತ್ತು ನಿಬಂಧನೆಗಳಿಗೆ ಮತ್ತು/ಅಥವಾ ಸಮಯ ಸಮಯಕ್ಕೆ ಯಸ್ ಬ್ಯಾಂಕ್‌ನಿಂದ ನಿರ್ದಿಷ್ಟಪಡಿಸಬಹುದಾದ ಇಂತಹ ಇತರ ನಿಯಮ ಮತ್ತು ನಿಬಂಧನೆಗಳಿಗೆ ಹೆಚ್ಚುವರಿಯಾಗಿರುತ್ತದೆ ಮತ್ತು ಅವುಗಳಿಗೆ ಭಂಗ ಉಂಟು ಮಾಡುವುದಿಲ್ಲ.

ಎ. **ವ್ಯಾಖ್ಯಾನಗಳು:** ಈ ಕೆಳಗಿನ ಪದಗಳು ಮತ್ತು ಪದಗುಚ್ಛಗಳು, ಸಂದರ್ಭಕ್ಕೆ ಪರಸ್ಪರ ಹೊಂದಿಕೆಯಾಗದಿದ್ದರೆ ಈ ಕೆಳಗೆ ಈ ದಸ್ತಾವೇಜಿನಲ್ಲಿ ತಿಳಿಸಲಾದ ಅರ್ಥವನ್ನು ಹೊಂದಿರುತ್ತವೆ :

1. ''**ಎಪ್ಲಿಕೇಶನ್**''ಎಂದರೆ ಯಸ್ ಪೇ ಎಪ್ಲಿಕೇಶನ್ ಎಂದಾಗಿದ್ದು, ಇದು ಯಸ್ ಬ್ಯಾಂಕ್‌ನಿಂದ ಮೊಬ್ಯಾಲ್/ಫೇಸ್‌ಬುಕ್ ಸ್ವರೂಪದ ಎಪ್ಲಿಕೇಶನ್ ಆಗಿದ್ದು ಯಸ್ ಬ್ಯಾಂಕ್‌ನಿಂದ ಯಸ್ ಪೇಯ ಮೂಲಕ ನೀಡಲಾಗುವ ಉತ್ಪನ್ನಗಳನ್ನು ಮತ್ತು ಸೇವೆಯನ್ನು ಪಡೆಯಲು ಇದನ್ನು ಫೇಸ್‌ಬುಕ್‌ನಿಂದ ಪಡೆಯಹುದಾಗಿದೆ ಅಥವಾ ಐಓಎಸ್ ಆ್ಯಪ್ ಸ್ಟೋರ್ ಅಥವಾ ಗೂಗಲ್ ಪ್ಲೇ ಸ್ಟೋರ್‌ನಿಂದ ಅಥವಾ ವಿಂಡೋಸ್ ಆ್ಯಪ್ ಸ್ಟೋರ್‌ನಿಂದ ಅಂಡ್ರಾಯಿಡ್ ಆಪರೇಟಿಂಗ್ ಸಿಸ್ಟಮ್‌ಗಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.
2. ''ವಾಲೆಟ್'' ಎಂದರೆ, ಯಸ್ ಬ್ಯಾಂಕ್‌ನಿಂದ ಉಪಯೋಗಿಸುವವರಿಗೆ ನೀಡಲಾದ ಪ್ರಿಪೈಯ್ಡ್ ಪಾವತಿ ಸಾಧನವಾಗಿದೆ (''ಪಿಪಿಐಗಳು'').
3. ''ಪಾರ್ಟನರ್ ವಾಲೆಟ್ಸ್''ಎಂದರೆ ಯಸ್ ಬ್ಯಾಂಕ್‌ನ ಬೇರೆ ಬೇರೆ ಪಾಲುದಾರರಿಂದ ಉಪಯೋಗಿಸುವವರಿಗೆ ನೀಡಲಾದ ಪ್ರಿಪೈಯ್ಡ್ ಪಾವತಿ ಸಾಧನವಾಗಿದೆ (''ಪಿಪಿಐಗಳು'').
4. ''**ಖಾತೆ(ಗಳು)**''ಎಂದರೆ ಉಪಯೋಗಿಸುವವರು ಯಸ್ ಬ್ಯಾಂಕ್‌ನಲ್ಲಿ ಹೊಂದಿರುವ ಒಂದು ಚಾಲನೆಯಲ್ಲಿರುವ ಬ್ಯಾಂಕ್ ಖಾತೆ ಅಥವಾ ಯಸ್ ಬ್ಯಾಂಕ್‌ನಿಂದ ನೀಡಲಾಗುತ್ತಿರುವ ಸೌಲಭ್ಯಗಳನ್ನು ಪಡೆಯಲು ಉಪಯೋಗಿಸುವವರು ಯಸ್ ಬ್ಯಾಂಕ್‌ಗೆ ಒದಗಿಸಬಹುದಾದ ಇತರ ಯಾವುದೇ ಖಾತೆಯಾಗಿದೆ.
5. ''**ಖಾತೆದಾರರು**''ಎಂದರೆ ಉಪಯೋಗಿಸುವವರು ಯಸ್ ಬ್ಯಾಂಕ್ ಅಥವಾ ಇತರ ಯಾವುದೇ ಬ್ಯಾಂಕ್‌ನಲ್ಲಿ ಹೊಂದಿರುವ ಒಂದು ಖಾತೆಯಾಗಿದ್ದು ಇದು ಅನಿವಾಸಿ ಭಾರತೀಯರು, ಕರೆಂಟ್ ಅಕೌಂಟ್, ಕಾರ್ಪೋರೇಟ್ ಖಾತೆದಾರರನ್ನು ಮತ್ತು ವಿದೇಶೀ ಖಾತೆದಾರರನ್ನು ಹೊರತುಪಡಿಸಿದೆ.

6. ''**ಗೌಪ್ಯ ಮಾಹಿತಿ**''ಇದು ''ಗೌಪ್ಯ'' ಎಂದು ಗುರುತುಮಾಡಿದ್ದರೂ ಅಥವಾ ಮಾಡದಿದ್ದರೂ ಸೌಲಭ್ಯಗಳಿಗೆ ಸಂಬಂಧಿಸಿ ಗೌಪ್ಯವೆಂದು ತಿಳಿದು ಯಸ್ ಬ್ಯಾಂಕ್‌ನ ತಿಳುವಳಿಕೆಗೆ ಬಂದ ವಾಸ್ತವ ಅಥವಾ ಅವಾಸ್ತವವಾದ ಅನ್ಯಥಾ ಗೌಪ್ಯವೆಂದು ತಿಳಿದುಕೊಳ್ಳಲಾಗುವ ಇತರ ಮಾಹಿತಿಯಾಗಿದ್ದು, ಇದು ಉಪಯೋಗಿಸುವವರಿಗೆ ಅವರ ವೈಯಕ್ತಿಕ ಅಥವಾ ವ್ಯಾಪಾರಕ್ಕೆ ಸಂಬಂಧಿಸಿರಬಹುದಾಗಿದೆ ಮತ್ತು ಇದು ತಾಂತ್ರಿಕ, ವಾಣಿಜ್ಯ ಅಥವಾ ಆರ್ಥಿಕ ಸ್ವರೂಪದ್ದಾಗಿರಬಹುದು. ಗೌಪ್ಯ ಮಾಹಿತಿಯು ಸಾಮಾನ್ಯವಾಗಿ ಅಥವಾ ಅದರ ವರ್ಗಾವಣೆಯ ಮೊದಲು ಉಪಲಬ್ಧವಿರುವ ಮಾಹಿತಿಯನ್ನು ಅಥವಾ ಅನ್ಯಥಾ ಪಡೆಯುವವರ ಸ್ವಾಧೀನದಲ್ಲಿ ಅದರ ವರ್ಗಾವಣೆಯ ಮೊದಲು ಗೌಪ್ಯವಲ್ಲದ ಬಾಧ್ಯತೆ ಇಲ್ಲದೆ ಅಥವಾ ಇಂತಹ ಪಾರ್ಟಿಯು ಸ್ವತಂತ್ರವಾಗಿ ವಿಕಾಸಗೊಳಿಸಿದ್ದು ಮಾಹಿತಿಯನ್ನು ಉಪಯೋಗಿಸದೆ ಅಥವಾ ಇತರ ಪಾರ್ಟಿಯಿಂದ ಪಡೆದಿರುವ ಸಾಮಾಗ್ರಿಯ ಮಾಹಿತಿಯನ್ನು ಒಳಗೊಂಡಿದೆ.

7. ''**ಸೌಲಭ್ಯಗಳು**'' ಎಂದರೆ, ಸಮಯ ಸಮಯಕ್ಕೆ ಅರ್ಜಿಯ ಮೂಲಕ ಯಸ್ ಬ್ಯಾಂಕ್‌ನಿಂದ ನೀಡಲಾಗುತ್ತಿರುವ ಎಲ್ಲಾ ಸೌಲಭ್ಯಗಳಾಗಿವೆ.

8. ''**ಎನ್‌ಪಿಸಿಐ**''ಎಂದರೆ, ಭಾರತದಲ್ಲಿ ಒಂದು ಸಶಕ್ತ ಪಾವತಿ ಮತ್ತು ಸೆಟ್ಲ್‌ಮೆಂಟ್ ಮೂಲ ಸೌಕರ್ಯವನ್ನು ನಿರ್ಮಿಸುವ ಉದ್ದೇಶಕ್ಕಾಗಿ ಪೇಮೆಂಟ್ ಆ್ಯಂಡ್ ಸೆಟ್ಲ್‌ಮೆಂಟ್ ಸಿಸ್ಟಮ್ ಕಾಯ್ದೆ 2007ರ ಪ್ರಾವಧಾನಗಳಡಿಯಲ್ಲಿನ ನ್ಯಾಶನಲ್ ಪೇಪೆಂಟ್ ಕಾರ್ಪೊರೇಶನ್ ಆಫ್ ಇಂಡಿಯಾ ಎಂದಾಗಿದೆ.

9. ''**ಮಿತಿಗಳು**''ಎಂದರೆ, ಸಮಯ ಸಮಯಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ನಿರ್ದಿಷ್ಟಪಡಿಸಲಾದಂತೆ ಯಾರೇ ಧಾರಕರಿಗೆ ನೀಡಲಾಗಿದ್ದು ಐಎನ್‌ಆರ್‌ನಿಂದ ಡಿನಾಮಿನೇಟ್ ಮಾಡಲಾದ ಇಂತಹ ಸಾಧನಗಳ ಗರಿಷ್ಠ ಮೌಲ್ಯವಾಗಿದೆ.

10. ''**ಮೊಬೈಲ್ ನಂಬರ್**''ಎಂದರೆ, ಎಪ್ಲಿಕೇಶನ್‌ನೊಂದಿಗೆ ನೋಂದಾವಣೆಯ ಸಮಯದಲ್ಲಿ ಉಪಯೋಗಿಸುವವರಿಂದ ನಿರ್ದಿಷ್ಟಪಡಿಸಲಾದ ನಂಬರ್ ಆಗಿದೆ.

11. ''**ಮೊಬೈಲ್ ಫೋನ್**'' ಎಂದರೆ ಯಸ್ ಬ್ಯಾಂಕ್‌ನಿಂದ ಸೌಲಭ್ಯಗಳನ್ನು ಪಡೆಯಲು ಉಪಯೋಗಿಸುವವರ ಮಾಲಕತ್ವದಲ್ಲಿರುವ ಅಥವಾ ಬಳಸಲಾಗುವ ಒಂದು ಊರ್ಜಿತ ಸಿಮ್‌ನೊಂದಿಗಿನ ಸ್ಮಾರ್ಟ್ ಫೋನ್ ಆಗಿದೆ.

12. ''**ವೈಯಕ್ತಿಕ ಮಾಹಿತಿ**''ಎಂದರೆ ಉಪಯೋಗಿಸುವವರಿಂದ ಪಡೆದುಕೊಂಡ ಅಥವಾ ಪಡೆದುಕೊಳ್ಳಲಿರುವ ಸೌಲಭ್ಯಗಳಿಗೆ ಸಂಬಂಧಿಸಿ ಅಥವಾ ಅದರ ಬಗ್ಗೆ ಉಪಯೋಗಿಸುವವರ ಕುರಿತಾಗಿ ಒದಗಿಸಲಾದ ಮತ್ತು/ಅಥವಾ ಯಸ್ ಬ್ಯಾಂಕ್‌ನಿಂದ ಪಡೆದುಕೊಳ್ಳಲಾದ ಯಾವುದೇ ಮಾಹಿತಿಯಾಗಿದೆ.

13. ''**ಪಿಪಿಐಗಳು**''ಎಂದರೆ ಸಮಯ ಸಮಯಕ್ಕೆ ತಿದ್ದುಪಡಿ ಮಾಡಲಾದ ತಾರೀಖು ಅಕ್ಟೋಬರ್ 11, 2017ರ ಇಶ್ಯುವೆನ್ಸ್ ಆ್ಯಂಡ್ ಆಪರೇಶನ್ ಆಫ್ ಪ್ರಿಪೈಯ್ಡ್ ಪೇಮೆಂಟ್ ಇನ್‌ಸ್ಟ್ರುಮೆಂಟ್‌ನ ಮಾಸ್ಟರ್ ಡೈರೆಕ್ಷನ್‌ನಂತೆ ಪೇಮೆಂಟ್ ಇನ್‌ಸ್ಟ್ರುಮೆಂಟ್ ಆಗಿದ್ದು ಇದು ಇಂತಹ ಇನ್‌ಸ್ಟ್ರುಮೆಂಟ್‌ಗಳಲ್ಲಿ ಸ್ಟೋರ್ ಮಾಡಲಾದ ಮೌಲ್ಯದ ಮೇಲೆ ಆರ್ಥಿಕ ಸೇವೆಗಳು, ರೆಮಿಟೆನ್ಸ್‌ಸೌಲಭ್ಯ ಇತ್ಯಾದಿಗಳನ್ನೊಳಗೊಂಡು ಸಾಮಾಗ್ರಿಗಳು ಮತ್ತು ಸೇವೆಗಳನ್ನು ಖರೀದಿಸುವ ಸೌಲಭ್ಯವನ್ನು ಒದಗಿಸುತ್ತದೆ.

14. ''**ವ್ಯವಹಾರ**''ಎಂದರೆ ನಿಧಿ ವರ್ಗಾವಣೆ ಸೇವೆ ಅಥವಾ ಮರ್ಚಂಟ್ ವೆಬ್‌ಸೈಟ್‌ಗಳಲ್ಲಿ ಬೇರೆ ಬೇರೆ ಉತ್ಪನ್ನಗಳು ಮತ್ತು ಸಮಯ ಸಮಯಕ್ಕೆ ಎಪ್ಲಿಕೇಶನ್‌ನ ಮೂಲಕ ಯಸ್ ಬ್ಯಾಂಕ್‌ನಿಂದ ನೀಡಲಾದ ಇತರ ಸೌಲಭ್ಯಗಳ ಪಾವತಿಗಳಿಗಾಗಿ ಎಪ್ಲಿಕೇಶನ್‌ನ ಬಳಕೆ ಎಂದಾಗಿದೆ.

15. ''**ಉಪಯೋಗಿಸುವವರು**''ಎಂದರೆ, ಯಸ್ ಬ್ಯಾಂಕ್‌ನ ಓರ್ವ ಖಾತೆದಾರರು ಹಾಗೂ ಎಪ್ಲಿಕೇಶನ್‌ಗಾಗಿ ನೋಂದಾವಣೆಗೊಂಡ ಇತರ ಯಾವನೇ ವ್ಯಕ್ತಿಯಾಗಿರುವವನು (ಯಸ್ ಬ್ಯಾಂಕಿನ ಸದ್ಯದ ಗ್ರಾಹಕನಾಗಿರದ ಅಥವಾ ಯಸ್ ಬ್ಯಾಂಕ್‌ನೊಂದಿಗೆ ವ್ಯಾಪಾರ ಸಂಬಂಧ ಇರದವನು) ಮತ್ತು ಸೌಲಭ್ಯಗಳನ್ನು ಪಡೆಯಲು ಅರ್ಹನಾದವನು ಎಂದಾಗಿದೆ.

16. ''**ಯುಪಿಐ**''ಎಂದರೆ, ಯುನಿಫೈಡ್ ಪೇಮೆಂಟ್ ಇಂಟರ್‌ಫೇಸ್, ಭಾರತದಲ್ಲಿ ಸಶಕ್ತ ಪಾವತಿ ಮತ್ತು ಸೆಟ್ಲ್‌ಮೆಂಟ್ ಮೂಲ ಸೌಕರ್ಯವನ್ನು ನಿರ್ಮಿಸುವ ಉದ್ದೇಶಕ್ಕಾಗಿ ಪೇಮೆಂಟ್ ಆ್ಯಂಡ್ ಸೆಟ್ಲ್‌ಮೆಂಟ್ ಸಿಸ್ಟಮ್ಸ್ ಕಾಯ್ದೆ 2017ರ ಪ್ರಾವಧಾನಗಳಡಿಯಲ್ಲಿ ರಿಟೈಲ್ ಪಾವತಿಗಳು ಮತ್ತು ಸೆಟ್ಲ್‌ಮೆಂಟ್ ಸಿಸ್ಟಮ್ಸ್‌ನ್ನು ಆಪರೇಟ್ ಮಾಡಲು ಒಂದು ಸಂಸ್ಥೆಯಾದ ನ್ಯಾಶನಲ್ ಪೇಮೆಂಟ್ ಕಾರ್ಪೊರೇಶನ್ ಆಫ್ ಇಂಡಿಯಾದಿಂದ ವಿಕಾಸಗೊಳಿಸಲಾದ ಮೊಬ್ಯಾಲ್‌ಸಾಧನ/ಎಪ್ಲಿಕೇಶನ್ ಪೇಮೆಂಟ್‌ನ ಮೂಲಕ ತಕ್ಷಣ ರಿಯಲ್-ಟ್ಯಾಮ್ ಹಣ ವರ್ಗಾವಣೆಯಾಗಿದೆ.

17. ''**ವಿಪಿಎ**''ಎಂದರೆ ಯುಪಿಐಯ ಭಾಗವಾಗಿ ನೀಡಲಾಗುವ ವರ್ಚುವಲ್ ಪೇಮೆಂಟ್ ಎಡ್ರಸ್ ಆಗಿದೆ.

18. ''**ವರ್ಚುವಲ್ ಕಾರ್ಡ್**''ಎಂದರೆ ಎಪ್ಲಿಕೇಶನ್‌ನೊಳಗೆ ಯಸ್ ಬ್ಯಾಂಕ್‌ನಿಂದ ನೀಡಲಾದ ಒಂದು ವರ್ಚುವಲ್ ಕಾರ್ಡ್ ಆಗಿದೆ,

19. ''**ಕ್ರೆಡಿಟ್ ಕಾರ್ಡ್**''ಎಂದರೆ ಯಸ್ ಬ್ಯಾಂಕ್ ವೆಬ್‌ಸೈಟ್‌ನಲ್ಲಿ ನಮೂದಿಸಲಾದ ನಿಯಮಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ಯಸ್ ಬ್ಯಾಂಕ್‌ನಿಂದ ನೀಡಲಾದ ಕ್ರೆಡಿಟ್ ಕಾರ್ಡ್‌ಗಳಾಗಿವೆ.

20. ''**ಟ್ರಾವೆಲ್ ಕಾರ್ಡ್**''ಎಂದರೆ, ಯಸ್ ಬ್ಯಾಂಕ್ ವೆಬ್‌ಸೈಟ್‌ನಲ್ಲಿ ನಮೂದಿಸಲಾದಂತೆ ನಿಯಮಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ಯಸ್ ಬ್ಯಾಂಕ್‌ನಿಂದ ನೀಡಲಾದ ಮಲ್ಟೀ ಕರೆನ್ಸಿ ಪ್ರೀ-ಪೈಯ್ಡ್ ಸಾಧನವಾಗಿದೆ.

21. ''**ಸೇವ್ಡ್ ಕಾರ್ಡ್**''ಎಂದರೆ, ಯಸ್ ಬ್ಯಾಂಕ್ ಪೇಯಲ್ಲಿ ಉಪಯೋಗಿಸುವವರಿಂದ ಸೇವ್ ಮಾಡಲಾದ ಡೆಬಿಟ್/ಕ್ರೆಡಿಟ್ ಕಾರ್ಡ್‌ಗಳ ವಿವರಗಳಾಗಿವೆ.

22. ''**ಆಟೊ ರಿಫಿಲ್**''ಎಂದರೆ, ವಾಲೆಟ್‌ನ ಆಟೋ-ಲೋಡಿಂಗ್‌ನ್ನು ಸಾಧ್ಯವಾಗಿಸಲು ಒಂದು ಸೌಲಭ್ಯ ಎಂದಾಗಿದೆ.

**ಬಿ. ಅರ್ಹತೆ ಮತ್ತು ಬಳಸುವಿಕೆ :**

1. ಸೌಲಭ್ಯಗಳು ಭಾರತದಲ್ಲಿರುವ ಎಲ್ಲಾ ಉಪಯೋಗಿಸುವವರಿಗೆ ಉಪಲಬ್ಧವಿದೆ. ಹೀಗೆ ಉಪಯೋಗಿಸುವವರು ಭಾರತದೊಳಗಿರುವ ಒಂದು ಟೆಲಿಕಾಂ ಕಂಪೆನಿಯಲ್ಲಿ ಒಂದು ಊರ್ಜಿತ ಮೊಬ್ಯಾಲ್ ನಂಬರ್‌ನ್ನು ನೋಂದಾಯಿಸಿಕೊಂಡಿರಬೇಕು ಮತ್ತು ಸೌಲಭ್ಯಗಳನ್ನು ಪಡೆಯಲು ವ್ಯಕ್ತಿಗತಗೊಳಿಸಲಾದ ಪಾಸ್‌ಕೋಡ್‌ನ್ನು ಸೇವ್ ಮಾಡುವುದನ್ನು ಒಳಗೊಂಡು, ಆದರೆ ಇದಕ್ಕೆ ಮಾತ್ರ ಸೀಮಿತಗೊಳ್ಳದೆ, ಆವಶ್ಯಕವಾದ ರುಜುವಾತುಗಳನ್ನು ದೃಢೀಕರಿಸುವ ಸ್ಥಿತಿಯಲ್ಲಿರಬೇಕು.

2. ಸೌಲಭ್ಯಗಳನ್ನು ಇಲ್ಲಿ ನಮೂದಿಸಲಾದಂತೆ ಅರ್ಹತೆಯ ಮಾನದಂಡಗಳನ್ನು ಪೂರೈಸುವ ಉಪಯೋಗಿಸುವವರಿಗೆ ಮಾತ್ರ ಮತ್ತು ಯಸ್ ಬ್ಯಾಂಕ್‌ನ ಸಂಪೂರ್ಣ ವಿವೇಚನೆಯಂತೆ ಉಪಲಬ್ಧಗೊಳಿಸಲಾಗುತ್ತದೆ. ಉಪಯೋಗಿಸುವವರಿಗೆ ಪೂರ್ವ ಸೂಚನೆ ನೀಡಿ ಅಥವಾ ನೀಡದೆ ಯಸ್ ಬ್ಯಾಂಕ್ ಯಾವುದೇ ಸಮಯದಲ್ಲಿ ಸೌಲಭ್ಯಗಳನ್ನು ನಿಲ್ಲಿಸಬಹುದು ಎಂಬುದನ್ನು ಉಪಯೋಗಿಸುವವರು ಒಪ್ಪಿಕೊಳ್ಳುತ್ತಾರೆ ಮತ್ತು ದೃಢೀಕರಿಸುತ್ತಾರೆ.

**ಸಿ. ಅಧಿಕಾರ ನೀಡಿಕೆ**

1. ಉಪಯೋಗಿಸುವವರು ಯಸ್ ಬ್ಯಾಂಕ್‌ಗೆ ಯಾವುದೇ ಸಮಯದಲ್ಲಿ ಉಪಯೋಗಿಸುವವರ ಖಾತೆ(ಗಳ)ಯನ್ನು ಮತ್ತು ಉಪಯೋಗಿಸುವವರಿಂದ ನೋಂದಾವಣೆ ಮತ್ತು ಎಪ್ಲಿಕೇಶನ್‌ನ ದೃಢೀಕರಣ ಅಥವಾ ಯಸ್ ಬ್ಯಾಂಕ್‌ನಿಂದ ಸೌಲಭ್ಯಗಳನ್ನು ಪಡೆಯಲು ವ್ಯವಹಾರದ ಕಾಲಾವಧಿಯಲ್ಲಿ ಹೊರಗೆಡಹಿದ ವೈಯಕ್ತಿಕ ವಿವರಗಳನ್ನು ತಲುಪಲು ಹಿಂದಕ್ಕೆ ಪಡೆದುಕೊಳ್ಳಲಾಗದಂತೆ ಮತ್ತು ಬೇಷರತ್ತಾಗಿ ಅಧಿಕಾರ ನೀಡುತ್ತಾರೆ.

2. ಉಪಯೋಗಿಸುವವರು ಯಾರೇ ಸೇವೆ ಒದಗಿಸುವವರಿಗೆ ಅಥವಾ ಇತರ ಮೂರನೇ ಪಾರ್ಟಿಗೆ, ತನ್ನ ಸ್ವಾಧೀನದಲ್ಲಿರುವ, ಉಪಯೋಗಿಸುವವರ ಸಂಪೂರ್ಣ ಮಾಹಿತಿಯನ್ನು, ಅದು ಯಸ್ ಬ್ಯಾಂಕ್‌ನಿಂದ ಆವಶ್ಯಕವಾಗುವಂತೆ, ಯಾವುದೇ ಸೂಚನೆಯ ಆವಶ್ಯಕತೆ (ಮೌಖಿಕ ಅಥವಾ ಲಿಖಿತ) ಅಥವಾ ಉಪಯೋಗಿಸುವವರ ಸಮ್ಮತಿ ಇಲ್ಲದೆ ಹೊರಗೆಡಹಲು ಸ್ಪಷ್ಟವಾಗಿ, ಹಿಂದಕ್ಕೆ ಪಡೆದುಕೊಳ್ಳಲಾಗದಂತೆ ಮತ್ತು ಬೇಷರತ್ತಾಗಿ ಯಸ್ ಬ್ಯಾಂಕ್‌ಗೆ ಅಧಿಕಾರ ನೀಡುತ್ತಾರೆ.

3. ಉಪಯೋಗಿಸುವವರು, ಉಪಯೋಗಿಸುವವರ ವಿವರಗಳನ್ನು ಮತ್ತು ವ್ಯವಹಾರದ ವಿವರಗಳನ್ನು ಯಸ್ ಬ್ಯಾಂಕ್‌ನ ಸಂಪೂರ್ಣ ವಿವೇಚನೆಯಂತೆ ನಿರ್ಧರಿಸಲಾದ ಸಮಯ ಮತ್ತು ಕಾಲಾವಧಿಯ ತನಕ ದಾಖಲಿಸಿಕೊಳ್ಳಲು, ಇರಿಸಿಕೊಳ್ಳಲು ಮತ್ತು ಕಾಪಾಡಿಕೊಳ್ಳಲು ಸ್ಪಷ್ಟವಾಗಿ, ಹಿಂದಕ್ಕೆ ತೆಗೆದುಕೊಳ್ಳಲಾಗದಂತೆ ಮತ್ತು ಬೇಷರತ್ತಾಗಿ ಯಸ್ ಬ್ಯಾಂಕ್‌ಗೆ ಅಧಿಕಾರ ನೀಡುತ್ತಾರೆ.

4. ಉಪಯೋಗಿಸುವವರು, ಸದ್ಯದ ಯಾವುದೇ ಉತ್ಪನ್ನಗಳು ಅಥವಾ ಪರಿಚಯಿಸಲಾದ ಯಾವುದೇ ಹೊಸ ಉತ್ಪನ್ನಗಳು ಅಥವಾ ಸಮಯ ಸಮಯಕ್ಕೆ ಯಸ್ ಬ್ಯಾಂಕ್‌ನಿಂದ ಪ್ರಸ್ತುತಪಡಿಸಲಾದ ಯಾವುದೇ ಪ್ರೋತ್ಸಾಹಕ ಆಫರ್‌ಗಳು ಅಥವಾ ಉಪಯೋಗಿಸುವವರ ತಿಳುವಳಿಕೆಗೆ ಸೂಕ್ತ ಎಂದು ಯಸ್ ಬ್ಯಾಂಕ್ ಪರಿಗಣಿಸಬಹುದಾದ ಯಾವುದೇ ಶುಭಾಶಯಗಳು, ಬ್ಯಾನರ್‌ಗಳು ಅಥವಾ ಇತರ ಪ್ರೋತ್ಸಾಹಗಳ ಬಗ್ಗೆ ಸಂದೇಶಗಳನ್ನು ಕಳುಹಿಸಲು ಉಪಯೋಗಿಸುವವರ ಮೊಬ್ಯಾಲ್ ಉಪಯೋಗಿಸಲು ಅಥವಾ ಕರೆಗಳನ್ನು ಮಾಡಲು ಯಸ್ ಬ್ಯಾಂಕ್‌ಗೆ ಮತ್ತು/ಅಥವಾ ಅವರ ಏಜೆಂಟರು/ಪ್ರತಿನಿಧಿಗಳಿಗೆ ಸ್ಪಷ್ಟವಾಗಿ, ಹಿಂತೆಗೆದುಕೊಳ್ಳಲಾಗದಂತೆ ಮತ್ತು ಬೇಷರತ್ತಾಗಿ ಅಧಿಕಾರ ನೀಡುತ್ತಾರೆ.

5. ಯಸ್ ಬ್ಯಾಂಕ್ ತನ್ನ ಸಂಪೂರ್ಣ ವಿವೇಚನೆಯಂತೆ ಉಪಯೋಗಿಸುವವರು ಮಾಡಿದ ಕೋರಿಕೆಯು ಯಸ್ ಬ್ಯಾಂಕ್‌ನಿಂದ ಆಯಾಯ ಸೌಲಭ್ಯಗಳಡಿಯಲ್ಲಿ ನಿರ್ದಿಷ್ಟಪಡಿಸಲಾದ ಆವಶ್ಯಕತೆಗಳಂತೆ ಇಲ್ಲ ಎಂದು ಕಂಡುಕೊಂಡರೆ, ಯಾವುದೇ ತಿರಸ್ಕರಣೆಯ ಸಂದೇಶವನ್ನು ಕಳುಹಿಸಲು ಅಥವಾ ಯಾವುದೇ ವ್ಯವಹಾರದ ಕೋರಿಕೆಯನ್ನು ತಿರಸ್ಕರಿಸಲು ಉಪಯೋಗಿಸುವವರು ಸ್ಪಷ್ಟವಾಗಿ, ಹಿಂತೆಗೆದುಕೊಳ್ಳಲಾಗದಂತೆ ಮತ್ತು ಬೇಷರತ್ತಾಗಿ ಯಸ್ ಬ್ಯಾಂಕ್‌ಗೆ ಅಧಿಕಾರ ನೀಡುತ್ತಾರೆ. ಯಸ್ ಬ್ಯಾಂಕ್‌ನಿಂದ ಮಾಡಲಾದ ಎಲ್ಲಾ ನಿರ್ಧಾರಗಳು ಊರ್ಜಿತವಾಗಿರುತ್ತವೆ ಮತ್ತು ಉಪಯೋಗಿಸುವವರಿಗೆ ಅನ್ವಯಿಸುತ್ತದೆ.

6. ಯಸ್ ಬ್ಯಾಂಕ್‌ನಿಂದ ನೀಡಲಾಗುತ್ತಿರುವ ಅಥವಾ ನೀಡಲಾಗಿದ್ದ ಸೌಲಭ್ಯಗಳನ್ನು ಪಡೆದುಕೊಂಡ ಸಲುವಾಗಿ ಉಪಯೋಗಿಸುವವರು ಯಸ್ ಬ್ಯಾಂಕ್‌ನಲ್ಲಿರುವ ಅಥವಾ ಇತರ ಯಾವುದೇ ಬ್ಯಾಂಕ್‌ನಲ್ಲಿರುವ ಖಾತೆ(ಗಳು)ಗೆ ಡೆಬಿಟ್ ಮಾಡಲು ಹಿಂತೆಗೆದುಕೊಳ್ಳಲಾಗದಂತೆ ಮತ್ತು ಬೇಷರತ್ತಾಗಿ ಯಸ್ ಬ್ಯಾಂಕ್‌ಗೆ ಅಧಿಕಾರ ನೀಡುತ್ತಾರೆ.

7. ಉಪಯೋಗಿಸುವವರು ಸೇವ್‌ಡ್ ಕಾರ್ಡ್ ಸೌಲಭ್ಯವನ್ನು ಉಪಯೋಗಿಸುವ ಆಯ್ಕೆ ಮಾಡಿದಲ್ಲಿ ಕಾರ್ಡ್ ವಿವರಗಳನ್ನು ಸೇವ್ ಮಾಡಲು/ಸ್ಟೋರ್ ಮಾಡಲು ಯಸ್ ಬ್ಯಾಂಕ್‌ಗೆ ಬೇಷರತ್ತಾಗಿ ಅಧಿಕಾರ ನೀಡುತ್ತಾರೆ.

8. ಉಪಯೋಗಿಸುವವರು ಎಪ್ಲಿಕೇಶನ್‌ನಲ್ಲಿ ಆಟೋ-ರಿಫಿಲ್ ಸೌಲಭ್ಯವನ್ನು ಆಯ್ಕೆ ಮಾಡಿದಾಗ ಸೇವ್‌ಡ್ ಕಾರ್ಡ್‌ಗೆ ಡೆಬಿಟ್ ಮಾಡುವ ಮೂಲಕ ವಾಲೆಟ್‌ಗೆ ಲೋಡ್ ಮಾಡಲು ಬೇಷರತ್ತಾಗಿ ಯಸ್ ಬ್ಯಾಂಕ್‌ಗೆ ಅಧಿಕಾರ ನೀಡುತ್ತಾರೆ.

9. ಎನ್‌ಪಿಸಿಐಯಿಂದ ಜಾರಿಗೊಳಿಸಲಾದ ಅನ್ವಯವಾಗುವ ಮಾರ್ಗಸೂಚಿಗಳಂತೆ ಯುಪಿಐ ನೋಂದಾವಣೆಯ ಭಾಗವಾಗಿ ಉಪಯೋಗಿಸುವವರ ಮೊಬ್ಯಾಲ್ ನಂಬರ್‌ನಿಂದ ಹೊರಹೋಗುವ ಎಸ್‌ಎಮ್‌ಎಸ್‌ಗಳನ್ನು ಕಳುಹಿಸಲು ಉಪಯೋಗಿಸುವವರು ಯಸ್ ಬ್ಯಾಂಕ್‌ಗೆ ಹಿಂತೆಗೆದುಕೊಳ್ಳಲಾಗದಂತೆ ಮತ್ತು ಬೇಷರತ್ತಾಗಿ ಅಧಿಕಾರ ನೀಡುತ್ತಾರೆ.

**ಡಿ. ಉಪಯೋಗಿಸುವವರಿಂದ ಪ್ರಾತಿನಿಧ್ಯ ಮತ್ತು ವಾರಂಟಿಗಳು**

1. ಫೇಸ್‌ಬುಕ್ ಖಾತೆ, ಮೊಬ್ಯಾಲ್ ಫೋನ್, ಡೇಟಾ ಕನೆಕ್ಷನ್ ಇತ್ಯಾದಿಗಳನ್ನೊಳಗೊಂಡು ಆದರೆ ಇವುಗಳಿಗೆ ಮಾತ್ರ ಸೀಮಿತಗೊಳ್ಳದೆ ಸೌಲಭ್ಯಗಳಡಿಯಲ್ಲಿ ನಿರ್ದಿಷ್ಟವಾದ ಪ್ರಯೋಜನಗಳನ್ನು ತಲುಪಲು ಮತ್ತು ಪಡೆದುಕೊಳ್ಳಲು ಒಂದು ಪೂರ್ವ -ಆವಶ್ಯಕತೆಯಾಗಿರುವ ಯಾವುದೇ ನಿಬಂಧನೆಯು ಉಪಯೋಗಿಸುವವರ ಸಂಪೂರ್ಣ ವಿವೇಚನೆ ಮತ್ತು ಜವಾಬ್ದಾರಿ ಎಂದು ಉಪಯೋಗಿಸುವವರು ತಿಳಿದುಕೊಂಡಿದ್ದಾರೆ ಮತ್ತು ದೃಢೀಕರಿಸುತ್ತಾರೆ.

2. ಉಪಯೋಗಿಸುವವರಿಂದ ಮಾಡಲಾದ ಎಲ್ಲಾ ವ್ಯವಹಾರಗಳಿಗೆ ಅಥವಾ ಪಡೆದುಕೊಂಡ ಸೌಲಭ್ಯಗಳಿಗೆ ಸಂಬಂಧಿಸಿ ಯಸ್ ಬ್ಯಾಂಕ್‌ನಿಂದ ಉತ್ಪತ್ತಿ ಮಾಡಲಾದ, ನಿರ್ವಹಿಸಿಕೊಳ್ಳಲಾದ ಮತ್ತು ಕಾಪಾಡಿಕೊಳ್ಳಲಾದ ಎಲ್ಲಾ ದಾಖಲೆಗಳು, ಡಾಟಾಗಳು

ಮತ್ತು ವಿವರಗಳ ವ್ಯವಹಾರಗಳ ಸಾಚಾತನ ಅಥವಾ ನಿಖರತೆಯ ನಿರ್ಣಾಯಕ ಪುರಾವೆಯಾಗಿದೆ ಎಂದು ಉಪಯೋಗಿಸುವವರು ಒಪ್ಪಿಕೊಳ್ಳುತ್ತಾರೆ, ದೃಢೀಕರಿಸುತ್ತಾರೆ ಮತ್ತು ಸ್ವೀಕರಿಸುತ್ತಾರೆ.

3. ಯಸ್ ಬ್ಯಾಂಕ್‌ನಿಂದ ಉತ್ಪತ್ತಿ ಮಾಡಲಾದ, ನಿರ್ವಹಿಸಲಾದ ಮತ್ತು ಕಾಪಾಡಿಕೊಳ್ಳಲಾದ ಎಲ್ಲಾ ದಾಖಲೆಗಳು, ಡಾಟಾ ಮತ್ತು ವಿವರಗಳು ಊರ್ಜಿತವಾಗಿವೆ, ಅಂತಿಮವಾಗಿದೆ ಮತ್ತು ಯಾವುದೇ ತರಹದ ಕ್ಲೇಮ್, ತಕರಾರು ಅಥವಾ ಅಡ್ಡಿ ಇಲ್ಲದೆ ಉಪಯೋಗಿಸುವವರಿಗೆ ಅನ್ವಯವಾಗುತ್ತದೆ ಎಂದು ಉಪಯೋಗಿಸುವವರು ಒಪ್ಪಿಕೊಳ್ಳುತ್ತಾರೆ, ದೃಢೀಕರಿಸುತ್ತಾರೆ ಮತ್ತು ಸ್ವೀಕರಿಸುತ್ತಾರೆ.

4. ಯಸ್ ಬ್ಯಾಂಕ್ ಮತ್ತು/ಅಥವಾ ಅವರ ಏಜೆಂಟರು/ಪ್ರತಿನಿಧಿಗಳಿಂದ ಮಾಡಲಾದ ಎಲ್ಲಾ ಕರೆಗಳು ಅಥವಾ ಸಂದೇಶಗಳು ಉಪಯೋಗಿಸುವವರ ವ್ಯಕ್ತಿ ಗುಪ್ತತೆಯ ಉಲ್ಲಂಘನೆ ಎಂದು ಪರಿಗಣನೆಯಲ್ಲ ಮತ್ತು ಈ ಕುರಿತಾಗಿ ಇದಕ್ಕೆ ಉಪಯೋಗಿಸುವವರು ಯಸ್ ಬ್ಯಾಂಕ್ ಮತ್ತು/ಅಥವಾ ಅವರ ಏಜೆಂಟರು/ಪ್ರತಿನಿಧಿಗಳನ್ನು ಬಾಧ್ಯರನ್ನಾಗಿ ಅಥವಾ ಜವಾಬ್ದಾರರನ್ನಾಗಿಸುವುದಿಲ್ಲ ಎಂದು ಉಪಯೋಗಿಸುವವರು ಹಿಂತೆಗೆದುಕೊಳ್ಳಲಾಗದಂತೆ ಮತ್ತು ಬೇಷರತ್ತಾಗಿ ಒಪ್ಪಿಕೊಳ್ಳುತ್ತಾರೆ.

5. ಎಪ್ಲಿಕೇಶನ್‌ನ ಮೂಲಕ ಎಲ್ಲಾ ಕೋರಿಕೆ(ಗಳು) ಅಥವಾ ವ್ಯವಹಾರ(ಗಳು) ಮತ್ತು/ಅಥವಾ ಉಪಯೋಗಿಸುವವರ ಕೋರಿಕೆಯಂತೆ ಉಪಯೋಗಿಸುವವರಿಂದ ಪಡೆಯಲಾದ ಇಂತಹ ಯಾವುದೇ ಕೋರಿಕೆಗಳು ಅಥವಾ ವ್ಯವಹಾರಗಳ ಅಧಿಕೃತೆಯನ್ನು ಯಸ್ ಬ್ಯಾಂಕ್‌ನಿಂದ ಪರಿಶೀಲಿಸುವ ಯಾವುದೇ ಬಾಧ್ಯತೆ ಇಲ್ಲದೆ ಮಾಡಲಾಗುತ್ತದೆ ಅಥವಾ ಸಂಸ್ಕರಿಸಲಾಗುತ್ತದೆ ಎಂದು ಉಪಯೋಗಿಸುವವರು ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತಾರೆ ಮತ್ತು ದೃಢೀಕರಿಸುತ್ತಾರೆ.

6. ಯಸ್ ಬ್ಯಾಂಕ್ ಈ ಸೌಲಭ್ಯದ ಮೂಲಕ ಸಮಯ ಸಮಯಕ್ಕೆ ಯಾವುದೇ ಹೊಸ ಸೇವೆಗಳನ್ನು ಪರಿಚಯಿಸುವ ಆಯ್ಕೆಯನ್ನು ಹೊಂದಿದೆ ಮತ್ತು ಇಂತಹ ಹೊಸ ಸೇವೆಗಳಿಗೆ ನೋಂದಾಯಿಸಿಕೊಳ್ಳಲು ಉಪಯೋಗಿಸುವವರು ಯಸ್ ಬ್ಯಾಂಕ್‌ಗೆ ಸ್ಪಷ್ಟವಾಗಿ ಅಧಿಕಾರ ನೀಡಿದ್ದಾರೆ ಎಂದು ಪರಿಗಣಿಸಲಾಗುತ್ತದೆ.

7. ಉಪಯೋಗಿಸುವವರು ಸಮಯ ಸಮಯಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ (''ಆರ್‌ಬಿಐ'')ನಿಂದ ನಿರ್ದಿಷ್ಟಪಡಿಸಲಾದಂತೆ ಫಂಡ್ ವರ್ಗಾವಣೆಗೆ ಅನ್ವಯಿಸುವ ಆ್ಯಂಟಿ-ಮನಿಲಾಂಡರಿಂಗ್ (ಎಎಮ್‌ಎಲ್) ಧೋರಣೆಗಳನ್ನು ಪಾಲಿಸತಕ್ಕದ್ದು.

8. ಯಸ್ ಬ್ಯಾಂಕ್‌ಗೆ ಪೂರೈಸಲಾದ ಮಾಹಿತಿಯಲ್ಲಿ ಯಾವುದೇ ದೋಷ ಅಥವಾ ತಪ್ಪು ಇದೆ ಎಂದು ಉಪಯೋಗಿಸುವವರಿಗೆ ಶಂಕೆ ಉಂಟಾದರೆ, ಉಪಯೋಗಿಸುವವರು ಇಂತಹ ದೋಷಗಳನ್ನು ಅಥವಾ ತಪ್ಪುಗಳನ್ನು ಕೂಡಲೇ ಲಿಖಿತ ಮೂಲಕ ಯಸ್ ಬ್ಯಾಂಕ್‌ಗೆ ತಿಳಿಸತಕ್ಕದ್ದು. ಯಸ್ ಬ್ಯಾಂಕ್ ಅತ್ಯುತ್ತಮ ಪ್ರಯತ್ನದ ಆಧಾರದಲ್ಲಿ ಸಾಧ್ಯವಾದಲ್ಲೆಲ್ಲಾ ಇಂತಹ ದೋಷ ಅಥವಾ ತಪ್ಪನ್ನು ತಕ್ಷಣ ಸರಿಪಡಿಸಲು ಪ್ರಯತ್ನಿಸುತ್ತದೆ.

9. ಉಪಯೋಗಿಸುವವರಿಂದ ಯಸ್ ಬ್ಯಾಂಕ್‌ನೊಂದಿಗೆ ನೋಂದಾಯಿಸಲಾದ ಮೊಬೈಲ್ ಫೋನ್ ಅಥವಾ ಮೊಬೈಲ್ ನಂಬರ್‌ನಿಂದ ಹೊರಬರುವ ಯಾವುದೇ ವ್ಯವಹಾರಗಳು ಉಪಯೋಗಿಸುವವರಿಂದ ಮತ್ತು ಉಪಯೋಗಿಸುವವರ ಮುಕ್ತ ಇಚ್ಛೆ, ಸಮ್ಮತಿ ಮತ್ತು ಸಂಪೂರ್ಣ ವಿವೇಚನೆಯಂತೆ ಮಾತ್ರ ಆರಂಭಿಸಲಾಗಿದೆ ಎಂದು ಉಪಯೋಗಿಸುವವರು ಸ್ವೀಕರಿಸುತ್ತಾರೆ.

10. ಉಪಯೋಗಿಸುವವರ ಖಾತೆಯಲ್ಲಿ ಯಾವುದೇ ಅನಧಿಕೃತ ವ್ಯವಹಾರವು ಉಪಯೋಗಿಸುವವರ ಗಮನಕ್ಕೆ ಬಂದರೆ ಉಪಯೋಗಿಸುವವರು ಯಸ್ ಬ್ಯಾಂಕ್‌ಗೆ ತಿಳಿಸುವ ಬಾಧ್ಯತೆಯನ್ನು ಹೊಂದಿದ್ದಾರೆ.

11. ಸೌಲಭ್ಯಗಳ ಉಪಯೋಗ ಮಾಡುವ ಮೂಲಕ ಉಪಯೋಗಿಸುವವರು. ಇಲ್ಲಿ ನಮೂದಿಸಲಾದ ಎಲ್ಲಾ ನಿಯಮ ಮತ್ತು ನಿಬಂಧನೆಗಳಿಗೆ ಮತ್ತು ಸಮಯ ಸಮಯಕ್ಕೆ ಯಸ್ ಬ್ಯಾಂಕ್‌ನಿಂದ ನಿರ್ದಿಷ್ಟಪಡಿಸಲಾದ ಇಂತಹ ಎಲ್ಲಾ ನಿಯಮ ಮತ್ತು ನಿಬಂಧನೆಗಳಿಗೆ ಒಪ್ಪಿಕೊಂಡಿದ್ದಾರೆ ಎಂದು ಪರಿಗಣಿಸಲಾಗುತ್ತದೆ ಮತ್ತು ಇದಕ್ಕೆ ಉಪಯೋಗಿಸುವವರು ಲಿಖಿತ ಮೂಲಕ ಒಪ್ಪಿದ್ದಾರೆಂಬ ರೀತಿಯಲ್ಲಿ ಉಪಯೋಗಿಸುವವರಿಗೆ ಅನ್ವಯಿಸುತ್ತದೆ ಎಂದು ಉಪಯೋಗಿಸುವವರು ಒಪ್ಪಿಕೊಳ್ಳುತ್ತಾರೆ ಮತ್ತು ದೃಢೀಕರಿಸುತ್ತಾರೆ.

12. ಸೌಲಭ್ಯಗಳಡಿಯಲ್ಲಿ ಎಲ್ಲಾ ಉದ್ದೇಶಗಳಿಗಾಗಿ, ಸೌಲಭ್ಯಗಳ ಮೂಲಕ ನೀಡಲಾದ ಎಪ್ಲಿಕೇಶನ್‌ನ ಅನಧಿಕೃತ ಮತ್ತು ಕಾನೂನು ಬಾಹಿರ ಉಪಯೋಗವನ್ನು ತಡೆಗಟ್ಟಲು ಉಪಯೋಗಿಸುವವರು ಆವಶ್ಯಕವಾದ ಎಲ್ಲಾ ಮುಂಜಾಗರೂಕತೆಗಳನ್ನೂ ತೆಗೆದುಕೊಳ್ಳುತ್ತಾರೆ.

13. ಉಪಯೋಗಿಸುವವರು ಪಾಸ್‌ಕೋಡ್/ಒಟಿಪಿ/ಕೋಡ್/ಪಾಸ್‌ವರ್ಡ್ ಕಾಪಾಡಿಕೊಳ್ಳಲು ಮತ್ತು/ಪಾಸ್‌ಕೋಡ್/ ಒಟಿಪಿ/ಪಾಸ್‌ಕೋಡ್/ಪಾಸ್‌ವರ್ಡ್‌ನ ಬಳಕೆ ಇಂತಹ ದುರ್ಬಳಕೆಯಿಂದಾಗ ಬಹುದಾದ ಎಲ್ಲಾ ಪರಿಣಾಮಗಳಿಗೆ ಜವಾಬ್ದಾರಾಗಿರುತ್ತಾರೆ.

14. ಉಪಯೋಗಿಸುವವರು ಸೌಲಭ್ಯವನ್ನು ಉಪಯೋಗಿಸುವಾಗ ಕಾನೂನು ಬಾಹಿರ, ಹಾನಿಕಾರಕ, ಬೆದರಿಕೆಯ, ದೂರುವ, ಅಶ್ಲೀಲ, ಮಾನಹಾನಿಯ, ಸಮಂಜಸವಲ್ಲದ, ಲೈಂಗಿಕ, ಅಗೌರವದ, ಅನುಚಿತ, ಉತ್ತೇಜಕ, ಅವಮಾನಕರ, ಹಿಂಸೆಯ, ದ್ವೇಷದ, ವಂಶ, ವಂಶಮೂಲವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಕಾನೂನು ಪ್ರಕಾರ, ನೈತಿಕವಾಗಿ, ಧಾರ್ಮಿಕವಾಗಿ ಆಕ್ಷೇಪಾರ್ಹ ಅಥವಾ ಅನ್ಯಥಾ ಆಕ್ಷೇಪಾರ್ಹವಾದುವುಗಳನ್ನು ಅಥವಾ ಪ್ರತಿಷ್ಠಿತ ಹಕ್ಕುಗಳು ಅಥವಾ ಅವರ ಖಾಸಗೀತನ ಅಥವಾ ಬೌದ್ಧಿಕ ಸೊತ್ತಿನ ಹಕ್ಕುಗಳನ್ನೊಳಗೊಂಡು ಆದರೆ  ಇವುಗಳಿಗೆ ಮಾತ್ರ ಸೀಮಿತಗೊಳ್ಳದೆ ಯಾವುದೇ ವಿಷಯದವನ್ನು ಅಪ್‌ಲೋಡ್ ಮಾಡಬಾರದು, ಡೌನ್‌ಲೋಡ್ ಮಾಡಬಾರದು, ಪೋಸ್ಟ್ ಮಾಡಬಾರದು ಅಥವಾ ಅನ್ಯಥಾ ವರ್ಗಾಯಿಸಬಾರದು.

15. ಯಸ್ ಬ್ಯಾಂಕ್, ಯಸ್ ಬ್ಯಾಂಕ್‌ನ  ಸ್ವಂತ ವಿವೇಚನೆಯಂತೆ  ಎಲ್ಲಾ ವ್ಯವಹಾರಗಳ ದಾಖಲೆಗಳನ್ನು ಯಾವುದೇ ವಿಧಾನದಲ್ಲಿ ಇಡಿಸಿಕೊಳ್ಳಬಹುದು ಎಂಬುದಕ್ಕೆ ಉಪಯೋಗಿಸುವವರು ಒಪ್ಪಿಕೊಳ್ಳುತ್ತಾರೆ, ದೃಢೀಕರಿಸುತ್ತಾರೆ ಮತ್ತು ಸ್ವೀಕರಿಸುತ್ತಾರೆ. ಯಾವುದೇ ತಕರಾರು ಉಂಟಾದಲ್ಲಿ ಯಸ್ ಬ್ಯಾಂಕ್‌ನ ದಾಖಲೆಗಳು ಅನ್ವಯವಾಗುತ್ತವೆ ಮತ್ತು ಎಪ್ಲಿಕೇಶನ್‌ನ ಮೂಲಕ ಮಾಡಲಾದ ಇಂತಹ ವ್ಯವಹಾರಗಳ ನಿರ್ಣಾಯಕ ಪುರಾವೆಯಾಗಿದೆ.

16. ಉಪಯೋಗಿಸುವವರು ಯಸ್ ಬ್ಯಾಂಕ್‌ನಿಂದ ಅಧಿಕಾರ ನೀಡಿದವುಗಳ ಹೊರತಾಗಿ ಯಾವುದೇ ವಿಧಾನದಲ್ಲಿ ಎಪ್ಲಿಕೇಶನ್‌ನ್ನು ಉಪಯೋಗಿಸಬಾರದು ಅಥವಾ ತಲುಪಬಾರದು. ಒಂದು ವೇಳೆ ಉಪಯೋಗಿಸುವವರು ಎಪ್ಲಿಕೇಶನ್‌ನ್ನು ಇಂತಹ ಯಾವುದೇ ಉದ್ದೇಶಗಳಿಗೆ ಉಪಯೋಗಿಸಿದರೆ ಅಥವಾ ಇಂತಹ ಉದ್ದೇಶಗಳು ಕಾನೂನು, ಬಾಹಿರ, ಸೂಕ್ತವಲ್ಲವಾಗಿದ್ದರೆ ಅಥವಾ ಅದು ಈ ನಿಯಮ ಮತ್ತು ನಿಬಂಧನೆಗಳಡಿಯಲ್ಲಿ ಅನಧಿಕೃತ ಎಂದಾದರೆ, ಉಪಯೋಗಿಸುವವರಿಂದ ಇಂತಹ ಅನಧಿ ಕೃತ ತಲುಪುವಿಕೆಯನ್ನು ತಡೆಗಟ್ಟಲು ಸಕಾರಣವಾದ ಎಲ್ಲಾ ಪ್ರಯಗಳನ್ನು ಅಥವಾ ಹೆಜ್ಜೆಗಳನ್ನು ತೆಗೆದುಕೊಳ್ಳುವ ಹಕ್ಕು ಯಸ್ ಬ್ಯಾಂಕಿಗೆ ಇದೆ.

17. ಎಪ್ಲಿಕೇಶನ್‌ಗೆ ಸಮಯ ಸಮಯಕ್ಕೆ ನಿರ್ವಹಣೆಯ ಆವಶ್ಯಕತೆ ಇದೆ ಮತ್ತು ಇಂತಹ ಸಮಯದಲ್ಲಿ ಉಪಯೋಗಿಸುವವರ ಕೋರಿಕೆಯನ್ನು ಅಥವಾ ವ್ಯವಹಾರವನ್ನು ಸಂಸ್ಕರಿಸಲು ಸಾಧ್ಯವಾಗದೆ ಇರಬಹುದು ಎಂದು ಉಪಯೋಗೀಸುವವರು ಒಪ್ಪಿಕೊಳ್ಳುತ್ತಾರೆ ಮತ್ತು ದೃಢೀಕರಿಸುತ್ತಾರೆ.

18. ಯಸ್ ಬ್ಯಾಂಕ್‌ನಿಂದ ಉಪಯೋಗಿಸುವವರಿಗೆ ನೀಡಲಾಗುತ್ತಿರುವ ಸೌಲಭ್ಯಗಳ ಉದ್ದೇಶಕ್ಕಾಗಿ ಷರತ್ತಿನಂತೆ ಉಪಯೋಗಿಸುವವರಿಂದ ಯಸ್ ಬ್ಯಾಂಕ್‌ಗೆ ಒದಗಿಸಲಾದ ಮಾಹಿತಿಯ ನಿಖರತೆಯ ಸಂಪೂರ್ಣ ಜವಾಬ್ದಾರಿಯನ್ನು ಉಪಯೋಗಿಸುವವರು ತೆಗೆದುಕೊಳ್ಳುತ್ತಾರೆ.

**ಈ.  ಉಪಯೋಗಿಸುವವರ ಬಾಧ್ಯತೆ:**

1. ಉಪಯೋಗಿಸುವವರು ಯಸ್ ಬ್ಯಾಂಕ್‌ಗೆ ಒದಗಿಸಿದ ಎಲ್ಲಾ ಅಥವಾ ಯಾವುದೇ ಮಾಹಿತಿಯ ನಿಖರತೆ ಅಥವಾ ಯಥಾರ್ಥತೆಗೆ ಉಪಯೋಗಿಸುವವರು ಪೂರ್ಣತ:  ಬಾಧ್ಯರಾಗಿದ್ದಾರೆ ಮತ್ತು ಜವಾಬ್ದಾರರಾಗಿದ್ದಾರೆ.

2. ಉಪಯೋಗಿಸುವವರು ಎಪ್ಲಿಕೇಶನ್‌ನ ಮೂಲಕ ಅಥವಾ ಯಸ್ ಬ್ಯಾಂಕ್‌ನ ಯಾವುದೇ ಮರ್ಚಂಟ್ ಅಪರೇಟರು/ಸೇವೆ ಒದಗಿಸುವರ ಮೂಲಕ ಉದ್ದೇಶಿತ ಅಥವಾ ಸರಿಯಾದ ಲಾಭಾರ್ಥಿಗೆ ಎಲ್ಲಾ ನಿಧಿ ವರ್ಗಾವಣೆಗಳಿಗೆ ಪೂರ್ಣತ: ಬಾಧ್ಯರಾಗಿದ್ದಾರೆ ಮತ್ತು ಜವಾಬ್ದಾರರಾಗಿದ್ದಾರೆ.

3. ಎಪ್ಲಿಕೇಶನ್‌ನ ಮೂಲಕ ನೀಡಲಾದ ಸೌಲಭ್ಯಗಳನ್ನು ಪಡೆಯುವ ಉಪಯೋಗಿಸುವವರಿಂದ ಯಸ್ ಬ್ಯಾಂಕ್‌ಗೆ ಒದಗಿಸಲಾದ ಮಾಹಿತಿಯಲ್ಲಿ ಕಂಡುಬರುವ ಯಾವುದೇ ದೋಷಗಳು ಅಥವಾ ತಪ್ಪುಗಳಿಗೆ ಉಪಯೋಗಿಸುವವರು ಪೂರ್ಣತ: ಬಾಧ್ಯರಾಗಿದ್ದಾರೆ ಮತ್ತು ಜವಾಬ್ದಾರರಾಗಿದ್ದಾರೆ.

4. ಯಸ್ ಬ್ಯಾಂಕ್‌ನಿಂದ ನೀಡಲಾದ ಅಥವಾ ನೀಡಲಾಗುವ ಸೌಲಭ್ಯಗಳನ್ನು ಉಪಯೋಗಿಸಲು ಆವಶ್ಯಕವಾದ ತನ್ನ ಮೊಬ್ಯಾಲ್ ಫೋನ್, ಮೊಬ್ಯಾಲ್ ನಂಬರ್ ಮತ್ತು ಪಾಸ್‌ಕೋಡ್‌ನ್ನು ಸಂರಕ್ಷಿಸಲು ಉಪಯೋಗಿಸುವವರು ಪೂರ್ಣತ: ಬಾಧ್ಯರಾಗಿದ್ದಾರೆ ಮತ್ತು ಜವಾಬ್ದಾರರಾಗಿದ್ದಾರೆ.

5. ಪಾಸ್‌ಕೋಡ್/ಪಾಸ್‌ವರ್ಡ್‌ಗಳ ಅಥವಾ ಎಪ್ಲಿಕೇಶನ್‌ನ ಯಾವುದೇ ಅನಧಿಕೃತ ಅಥವಾ ಕಾನೂನು ಬಾಹಿರ ಉಪಯೋಗ ಅಥವಾ ಯಸ್ ಬ್ಯಾಂಕ್‌ಗೆ ನೀಡಲಾದ ಯಾವುದೇ ಮೋಸದ ಅಥವಾ ತಪ್ಪು ನಿರ್ದೇಶನಕ್ಕೆ ಉಪಯೋಗಿಸುವವರು ಯಸ್ ಬ್ಯಾಂಕ್‌ಗೆ ಪುರ್ಣತ: ಬಾಧ್ಯರಾಗಿದ್ದಾರೆ ಮತ್ತು ಜವಾಬ್ದಾರರಾಗಿದ್ದಾರೆ.

6. ಉಪಯೋಗಿಸುವವರು, ಉಪಯೋಗಿಸುವವರ ಪರವಾಗಿ ಯಾವುದೇ ಕ್ರಿಯೆಯ ಅಥವಾ ಲೋಪಗಳ ಕಾರಣ ಯಾವುದೇ ಅಥವಾ ಎಲ್ಲಾ ನಷ್ಟಗಳಿಗೆ ಯಸ್ ಬ್ಯಾಂಕ್‌ಗೆ ಪೂರ್ಣತ: ಬಾಧ್ಯರಾಗಿದ್ದಾರೆ ಮತ್ತು ಜವಾಬ್ದಾರರಾಗಿದ್ದಾರೆ ಮತ್ತು ಅವರ ಪರವಾಗಿ ಎಪ್ಲಿಕೇಶನ್‌ನಲ್ಲಿ ಇಂತಹ ಯಾವುದೇ ಅನಧಿಕೃತ ಬಳಕೆ/ತಲುಪುವಿಕೆ ಅಥವಾ ಅವನಿಗೆ ತಿಳಿದಿರುವಂತೆ ಅಥವಾ ನಿಜವೆಂದು ನಂಬಿಕೆಯಾದಂತೆ ಎಪ್ಲಿಕೇಶನ್‌ನಲ್ಲಿನ ಒಟಿಪಿ/ಪಾಸ್‌ಕೋಡ್/ಪಾಸ್‌ವರ್ಡ್‌ನ ದುರ್ಬಳಕೆ ಅಥವಾ ಸೌಲಭ್ಯದ ಸುರಕ್ಷತೆಯ ಬಗ್ಗೆ ಅಥವಾ ಇತರ ಯಾವುದೇ ಉಲ್ಲಂಘನೆಯ ಬಗ್ಗೆ ಕೂಡಲೇ ಯಸ್ ಬ್ಯಾಂಕ್‌ಗೆ ತಿಳಿಸಲು ಒಪ್ಪಿಕೊಳ್ಳುತ್ತಾರೆ.

7. ಉಪಯೋಗಿಸುವವರ ಮೊಬ್ಯಾಲ್ ನಂಬರ್‌ನಲ್ಲಿ ಬದಲಾವಣೆಯಾದರೆ ಅಥವಾ ಉಪಯೋಗಿಸುವವರ ಮೊಬ್ಯಾಲ್ ಫೋನ್ ಕಳೆದು ಹೋದರೆ ಅಥವಾ ಉಪಯೋಗಿಸುವವರ ಮೊಬ್ಯಾಲ್ ಫೋನ್ ಇತರ ಯಾರೇ ಮೂರನೇ ಪಾರ್ಟಿಗೆ ಅಲಾಟ್ ಮಾಡಲಾದರೆ ಅಥವಾ ಗೊತ್ತು ಮಾಡಲಾದರೆ, ಇವನ್ನೊಳಗೊಂಡು ಆದರೆ ಇದಕ್ಕೆ ಮಾತ್ರಾ ಸೀಮಿಸವಾಗದೆ ಎಲ್ಲಾ ಸೌಲಭ್ಯಗಳನ್ನು ಅಮಾನತಿನಲ್ಲಿರಿಸಲು ಯಸ್ ಬ್ಯಾಂಕ್‌ಗೆ ಮಾಡಿದ ಯಾವುದೇ ಕೋರಿಕೆಗೆ ಪೂರ್ಣತಃ ಬಾಧ್ಯರಾಗಿದ್ದಾರೆ ಮತ್ತು ಜವಾಬ್ದಾರರಾಗಿದ್ದಾರೆ.

8. ಸಮಯ ಸಮಯಕ್ಕೆ ಯಸ್ ಬ್ಯಾಂಕ್‌ನಿಂದ ಮಾಡಲಾದ ಯಾವುದೇ ಬದಲಾವಣೆಗಳು, ತಿದ್ದುಪಡಿ ಅಥವಾ ಪರಿವರ್ತನೆಗಳನ್ನೊಳಗೊಂಡು ಇಲ್ಲಿರುವ ನಿಯಮ ಮತ್ತು ನಿಬಂಧನೆಗಳನ್ನು ಉಪಯೋಗಿಸುವವರು ಉಲ್ಲಂಘಿಸಿದರೆ ಉಪಯೋಗಿಸುವವರು ಹಿಂದಕ್ಕೆ ತೆಗೆದುಕೊಳ್ಳಲಾಗದಂತೆ ಮತ್ತು ಬೇಷರತ್ತಾಗಿ ಎಲ್ಲಾ ನಷ್ಟ *(ವಾಸ್ತವಿಕ ಮತ್ತು ಕಂಟಿಂಜೆಂಟ್)* ಹಾನಿ ಅಥವಾ ಕ್ಲೈಮ್ ಅಥವಾ ಡಿಮಾಂಡ್‌ಗೆ ಯಸ್ ಬ್ಯಾಂಕ್‌ಗೆ ಬಾಧ್ಯರಾಗಿರುತ್ತಾರೆ.

9. ಯಸ್ ಬ್ಯಾಂಕ್‌ನಿಂದ ನೀಡಲಾದ ಎಪ್ಲಿಕೇಶನ್ , ಉಪಯೋಗಿಸುವವರ ಸಂತ ಅಪಾಯ ಮತ್ತು ಜವಾಬ್ದಾರಿಯಲ್ಲಿದೆ ಮತ್ತು ಇಂತಹ ಅಪಾಯಗಳು ಈ ಮುಂದಿನವುಗಳನ್ನು ಒಳಗೊಂಡಿವೆ ಎಂದು ಉಪಯೋಗಿಸುವವರು ತಿಳಿದುಕೊಂಡಿದ್ದಾರೆ ಮತ್ತು ಒಪ್ಪಿಕೊಳ್ಳುತ್ತಾರೆ (i) ಯಸ್ ಬ್ಯಾಂಕ್‌ನ ನಿಯಂತ್ರಣಕ್ಕೆ ಹೊರತಾದ ಯಾವುದೇ ತಾಂತ್ರಿಕ ದೋಷ, ವೈಫಲ್ಯ , ಅಡಚಣೆ, ನೆಟ್‌ವರ್ಕ್ ವೈಫಲ್ಯ , ಕಾನೂನಿನ ನಿರ್ಬಂಧಗಳು ಮತ್ತು ಇತರ ಕಾರಣಗಳು (ii) ಉಪಯೋಗಿಸುವವರಿಂದ ಒದಗಿಸಲಾದ ಯಾವುದೇ ಮಾಹಿತಿಯು ತಪ್ಪು/ದೋಷಪೂರ್ಣ/ನಿಖರವಾಗಿಲ್ಲ ಎಂದು ತಿಳಿಯುವುದು (iii) ಪಕ್ರಿಯೆಯಲ್ಲಿ ಒಳಗೊಂಡಿರುವ ಯಾರೇ ಸೇವೆ ಒದಗಿಸುವವರು/ಇತರ ಮೂರನೇ ಪಾರ್ಟಿ/ಸಂಸ್ಥೆಯ ಕಾರ್ಯಾಚರಣೆಗಾಗಿ (iv) ಫಂಡ್ ವರ್ಗಾವಣೆಯು ವಿಳಂಬದಿಂದಾಗಿ ಉಂಟಾಗುವ ಸೇವೆಯಲ್ಲಿನ ಯಾವುದೇ ದೋಷ, ತಪ್ಪು, ವೈಫಲ್ಯ ಅಥವಾ ತಡೆ ಮತ್ತು (v) ವರ್ಗಾವಣೆ, ತಲುಪಿಸುವಿಕೆಯಲ್ಲಿ ಯಾವುದೇ ವಿಳಂಬ ಅಥವಾ ಆನ್‌ಲೈನ್/ಇಲೆಕ್ಟ್ರಾನಿಕ್ ನಿರ್ದೇಶನಗಳ ಡೆಲಿವರಿಯು

ತಲುಪದಿರುವುದು. ಅಥವಾ ಅದರಲ್ಲಿನ ವರ್ಗಾವಣೆ ಅಥವಾ ತಲುಪಿಸುವಿಕೆಯಲ್ಲಿ ಯಾವುದೇ ಕಾರಣದಿಂದ ನಿರ್ದೇಶನಕ್ಕೆ ಅಸಂಕೇತೀಕರಣದಲ್ಲಿ ಯಾವುದೇ ತಪ್ಪು, ಲೋಪ ಅಥವಾ ದೋಷ ಅಥವಾ ಯಸ್ ಬ್ಯಾಂಕ್‌ನ ನಿಯಂತ್ರಣಕ್ಕೆ ಹೊರತಾದ ಯಾವುದೇ ಕ್ರಮ ಅಥವಾ ಪ್ರಕರಣ.

**ಎಫ್.ಯಸ್ ಬ್ಯಾಂಕ್‌ನ ಬಾಧ್ಯತೆಯ ಹೊರತುಪಡಿಸುವಿಕೆ:**

1. ಅನ್ಯಥಾ ಇಲ್ಲಿ ಸ್ಪಷ್ಟವಾಗಿ ಒದಗಿಸಲಾಗಿದ್ದು, ಉಪಯೋಗಿಸುವವರು ಮತ್ತು ಇತರ ಮರ್ಚಂಟ್ ಆಪರೇಟರರು/ಸೇವೆ ಒದಗಿಸುವವರ ನಡುವೆ ಮಾಡಲಾಗಿರುವುದರ ಹೋರತಾಗಿ ಯಾವುದೇ ರೀತಿಯ ವ್ಯವವಹಾರಕ್ಕೆ ಯಸ್ ಬ್ಯಾಂಕ್ ಜವಾಬ್ದಾರಿಯನ್ನು ಹೊಂದಿಲ್ಲ ಎಂದು ಕೂಡಾ ಉಪಯೋಗಿಸುವವರು ತಿಳಿದುಕೊಂಡಿದ್ದಾರೆ, ಒಪ್ಪಿಕೊಳ್ಳುತ್ತಾರೆ ಮತ್ತು ದೃಢೀಕರಿಸುತ್ತಾರೆ.

2. ಉಪಯೋಗಿಸುವವರ ಮಾಹಿತಿಯನ್ನು ಗೌಪ್ಯವಾಗಿ ಇರಿಸಿಕೊಳ್ಳಲಾಗುತ್ತದೆ ಎಂದು ಖಾತ್ರಿ ಮಾಡಿಕೊಳ್ಳಲು ಯಸ್ ಬ್ಯಾಂಕ್ ಸಕಾರಣವಾದ ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತದೆ. ಆದರೆ ಯಸ್ ಬ್ಯಾಂಕ್ ಮತ್ತು/ಅಥವಾ ಅದರ ಸಿಬ್ಬಂದಿಗಳು ಅಥವಾ ಏಜೆಂಟರು ಅಥವಾ ಪ್ರತಿಭಿದಿಗಳಿಂದ ಯಾವುದೇ ಕ್ರಿಯೆ, ಲೋಪ ಅಥವಾ ನಡೆಸುವಿಕೆಯನ್ನು ಪರಿಗಣಿಸದೆ ಯಾವುದೇ ರೀತಿಯಲ್ಲಿ ಇಂತಹ ಮಾಹಿತಿಯ ಹೊರಗೆಡಹುವಿಕೆ ಅಥವಾ ಸೋರಿಕೆಗೆ ಯಸ್ ಬ್ಯಾಂಕ್ ಯಾವುದೇ ರೀತಿಯಲ್ಲಿ ಜವಾಬ್ದಾರಿಯನ್ನು ಹೊಂದಿಲ್ಲ.

3. ಇಂತಹ ಮೂರನೇ ವ್ಯಕ್ತಿ ವ್ಯಕ್ತಿಗಳು ಎಪ್ಲಿಕೇಶನ್‌ನಲ್ಲಿ ಉಪಯೋಗಿಸುವವರು ಎಂದು ನೋಂದಾವಣೆಗೊಂಡಿರದಿದ್ದರೆ, ಎಪ್ಲಿಕೇಶನ್‌ಗೆ ಸಂಬಂಧಿಸಿ ಉಪಯೋಗಿಸುವವರಿಂದ ಆಹ್ವಾನಿಸಲಾದ ಯಾರೇ ಮೂರನೇ ವ್ಯಕ್ತಿಗಳಿಗೆ ಅಥವಾ ಪಾರ್ಟಿಗಳಿಗೆ ಯಸ್ ಬ್ಯಾಂಕ್ ಜವಾಬ್ದಾರಿಯನ್ನು ಹೊಂದಿಲ್ಲ ಅಥವಾ ಬಾಧ್ಯರಲ್ಲ.

4. ಎಪ್ಲಿಕೇಶನ್‌ನಲ್ಲಿ ಯಸ್ ಬ್ಯಾಂಕ್‌ನಿಂದ ನೀಡುವ ಸೌಲಭ್ಯಗಳು ವೈರಸ್‌ಗಳು ಅಥವಾ ಇತರ ಕಾಡುವ ವಿನಾಶಕಾರಿ ಅಥವಾ ಕರಪ್ಟಿಂಗ್ ಕೋಡ್ ಮತ್ತು ಪ್ರೋಗ್ರಾಮ್‌ನಿಂದ ಪರಿಣಾಮಗೊಳ್ಳಬಹುದು ಮತ್ತು ಇದಕ್ಕಾಗಿ ಯಾವುದೇ ರೀತಿಯಲ್ಲಿ ಯಸ್ ಬ್ಯಾಂಕ್ ಬಾಧ್ಯರಲ್ಲ ಅಥವಾ ಜವಾಬ್ದಾರರಲ್ಲ ಎಂದು ಉಪಯೋಗಿಸುವವರು ದೃಢೀಕರಿಸುತ್ತಾರೆ ಮತ್ತು ಒಪ್ಪಿಕೊಳ್ಳುತ್ತಾರೆ.

5. ಯಸ್ ಬ್ಯಾಂಕ್‌ನಿಂದ ನಡೆಸಲಾಗುತ್ತಿರುವ ಎಪ್ಲಿಕೇಶನ್‌ನ ಯಾವುದೇ ನಿರ್ವಹಣೆಯ ಕಾರಣ ನಿರ್ದೇಶನಗಳ ಸಂಸ್ಕರಣೆಯಲ್ಲಿನ ವಿಳಂಬ ಯಾವುದೇ ಅಥವಾ ನಿರ್ದೇಶನಗಳ ಸಂಸ್ಕರಣೆಯ ವೈಫಲ್ಯಕ್ಕೆ ಯಸ್ ಬ್ಯಾಂಕ್ ಬಾಧ್ಯರಲ್ಲ.

6. ಯಸ್ ಬ್ಯಾಂಕ್ ನೇರವಾದ ಅಥವಾ ಪರೋಕ್ಷವಾದ ನಷ್ಟದ ಕಾರಣದಿಂದಾಗುವ ಅಥವಾ ಅನ್ಯಥಾ ಯಾವುದೇ ಕಾರಣಕ್ಕಾಗಿ ಉಪಯೋಗಿಸುವರ ನಿರ್ದೇಶನವನ್ನು ಕಾರ್ಯಗತಗೊಳಿಸುವಲ್ಲಿನ ಯಾವುದೇ ವೈಫಲ್ಯ ಅಥವಾ ಅಸಾಧ್ಯತೆಯಿಂದಾದ ಎಲ್ಲಾ ಮತ್ತು ಯಾವುದೇ ಬಾಧ್ಯತೆಯನ್ನು ನಿರಾಕರಿಸುತ್ತದೆ.

7. ಉಪಯೋಗಿಸುವವರು ಇಂತಹ ಎಪ್ಲಿಕೇಶನ್‌ನ್ನು ಉಪಯೋಗಿಸುವ ಕಾರಣ ಗೌಪ್ಯತೆಯ ಯಾವುದೇ ಉಲ್ಲಂಘನೆಗೆ ಯಸ್ ಬ್ಯಾಂಕ್ ಜವಾಬ್ದಾರರಲ್ಲ ಅಥವಾ ಬಾಧ್ಯರಲ್ಲ.

8. ಈ ಮುಂದಿನವುಕ್ಕೆ ಬಗ್ಗೆ ಯಸ್ ಬ್ಯಾಂಕ್ ಯಾವುದೇ ಜವಾಬ್ದಾರಿ ಅಥವಾ ಬಾಧ್ಯತೆಯನ್ನು ಹೊಂದಿಲ್ಲ ಎಂದು ಉಪಯೋಗಿಸುವವರು ಒಪ್ಪಿಕೊಳ್ಳುತ್ತಾರೆ (i) ವಿಶ್ವಾಸದ ಮೇಲೆ ಉಪಯೋಗಿಸುವವರ ನಿರ್ದೇಶನಗಳ ಮೇಲೆ ಭರವಸೆ ಇರಿಸಿ ಯಸ್ ಬ್ಯಾಂಕ್‌ನಿಂದ ಮಾಡಲಾದ ಯಾವುದೇ ವ್ಯವಹಾರಗಳು (ii) ಉಪಯೋಗಿಸುವವರಿಂದ ನೀಡಲಾದ ನಿರ್ದೇಶನಗಳು ಯಥಾರ್ಥವಾಗಿಲ್ಲ ಅಥವಾ ಅನ್ಯಥಾ ಸ್ಪಷ್ಟವಿಲ್ಲ, ಸೂಕ್ತವಾಗಿಲ್ಲ, ಅಸ್ಪಷ್ಟ ಅಥವಾ ಸಂಶಯಾಸ್ಪದ ಅಥವಾ ಕಾನೂನಿಗೆ ವಿರುದ್ಧವಾಗಿದೆ ಎಂದು ಯಸ್ ಬ್ಯಾಂಕ್‌ಗೆ ನಂಬಲು ಕಾರಣವಿದ್ದರೆ (iii) ಸೇವೆಯಲ್ಲಿ ಯಾವುದೇ ತಪ್ಪು, ದೋಷ, ವೈಫಲ್ಯ ಅಥವಾ ತಡೆಗಾಗಿ ಉಪಯೋಗಿಸುವವರಿಂದಾದ ಅಥವಾ ಅವರು ಅನುಭವಿಸಿದ ಯಾವುದೇ ನಷ್ಟ ಅಥವಾ ಹಾನಿ ಅಥವಾ ಯಸ್ ಬ್ಯಾಂಕ್‌ನ ನಿಯಂತ್ರಣಕ್ಕೆ ಹೊರತಾದ ಯಾವುದೇ ಕಾರಣದಿಂದಾಗಿ ವರ್ಗಾವಣೆ/ರೆಮಿಟೆನ್ಸ್‌ನ ವಿಳಂಬದ ಕಾರಣ

ಯಾವುದೇ ಪರಿಣಾಮಗಳು (iv) ಸೌಲಭ್ಯಗಳನ್ನು ಉಪಯೋಗಿಸಿ ಉಪಯೋಗಿಸುವವರು ಮೂರನೇ ಪಾರ್ಟಿಗೆ ನೀಡಿದ ಮಾಹಿತಿ/ನಿರ್ದೇಶನಗಳಗೆ ಯಾವುದೇ ಮೂರನೇ ಪಾರ್ಟಿಯಿಂದ ಯಾವುದೇ ಅನಧಿಕೃತ ತಲುಪುವಿಕೆ. (v) ಸೌಲಭ್ಯಗಳನ್ನು ಪಡೆದುಕೊಳ್ಳವಾಗ ಉಪಯೋಗಿಸುವವರಿಗೆ ಆದ ಯಾವುದೇ ನೇರ, ಪರೋಕ್ಷ ಅಥವಾ ಅದರ ಪರಿಣಾಮದ ಹಾನಿಗಳು.

9. ಗೌಪ್ಯಸ್ವರೂಪದ ಎಲ್ಲಾ ಮಾಹಿತಿಯ ಹೊರಗೆಡಹುವಿಕೆಯ ಕಾರಣ ಉಪಯೋಗಿಸುವವರಿಗೆ ಆದ ಅಥವಾ ಅವರು ಅನುಭವಿಸಿದ ಯಾವುದೇ ನಷ್ಟ, ಹಾನಿ, ಬಾಧ್ಯತೆಯ ಬಗ್ಗೆ ಯಸ್ ಬ್ಯಾಂಕ್ ಯಾವುದೇ ಜವಾಬ್ದಾರಿಯನ್ನು ಅಥವಾ ಬಾಧ್ಯತೆಯನ್ನು ಹೊರುವುದಿಲ್ಲಎಂದು ಉಪಯೋಗಿಸುವವರು ಒಪ್ಪಿಕೊಳ್ಳುತ್ತಾರೆ.

10. ಉಪಯೋಗಿಸುವವರಿಂದ ಒದಗಿಸಲಾದ ಮಾಹಿತಿಯ ನಿಖರತೆಯನ್ನು ಖಾತ್ರಿಮಾಡಿಕೊಳ್ಳಲು ಯಸ್ ಬ್ಯಾಂಕ್‌ನಿಂದ ತೆಗೆದುಕೊಳ್ಳಲಾದ ಅವಶ್ಯಕ ಹೆಜ್ಜೆಗಳ ಹೊರತಾಗಿಯೂ ಉಂಟಾದ ಅಥವಾ ಉಂಟಾಗಬಹುದಾದ ಯಾವುದೇ ತಪ್ಪುಗಳಿಗೆ ಯಸ್ ಬ್ಯಾಂಕ್ ಜವಾಬ್ದಾರಿಯನ್ನು ಹೊಂದಿಲ್ಲ ಮತ್ತು ಯಸ್ ಬ್ಯಾಂಕ್‌ನಿಂದ ಒದಗಿಸಲಾದ ದೋಷಪೂರ್ಣ ಮಾಹಿತಿಯ ಪರಿಣಾಮವಾಗಿ ಉಪಯೋಗಿಸುವವರು ಅನುಭವಿಸಿದ ಅಥವಾ ಅನುಭವಿಸುವ ಯಾವುದೇ ನಷ್ಟದಕ್ಕೆ ಯಸ್ ಬ್ಯಾಂಕ್‌ನ ವಿರುದ್ಧ ಉಪಯೋಗಿಸುವವರು ಯಾವುದೇ ಕ್ಲೇಮ್‌ನ್ನು ಹೊಂದಿಲ್ಲ.

11. ಯಸ್ ಬ್ಯಾಂಕ್ ಯಾವುದೇ ರೀತಿಯಲ್ಲಿ ಯಾವುದೇ ಪರ್ಯಾಪ್ತವಲ್ಲದ ಅಥವಾ ಕೆಟ್ಟ ಸೇವೆಗಳಿಗೆ ಅಥವಾ ಉಪಯೋಗಿಸುವವರು ಅನುಭವಿಸಬಹುದಾದ ಯಾವುದೇ ನಷ್ಟಕ್ಕೆ ಬಾಧ್ಯರಲ್ಲ.

**ಜಿ. ಸೇವೆಯ ನಿಯಮಗಳು**

1. ಉಪಯೋಗಿಸುವವರು ಎಪ್ಲಿಕೇಶನ್‌ನ ಮೂಲಕ ನಿರ್ದಿಷ್ಟವಾಗಿ ಕೇಳಿಕೊಂಡರೆ ಮಾತ್ರ ಯಸ್ ಬ್ಯಾಂಕ್‌ನಿಂದ ಸೌಲಭ್ಯಗಳು ಒದಗಿಸಲ್ಪಡುತ್ತವೆ.

2. ಯಸ್ ಬ್ಯಾಂಕ್‌ನಿಂದ ಒದಗಿಸಲಾದ ಅಥವಾ ಒದಗಿಸಲಾಗುತ್ತಿರುವ ಎಪ್ಲಿಕೇಶನ್‌ಗಾಗಿ ನೋಂದಾವಣೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಉಪಯೋಗಿಸುವವರು ಯಸ್ ಬ್ಯಾಂಕ್‌ನ ಆವಶ್ಯಕತೆಯಂತೆ ತನ್ನ ವಿವರಗಳನ್ನು ನೋಂದಾಯಿಸಿಕೊಳ್ಳಬೇಕು.

3. ಯಸ್ ಬ್ಯಾಂಕ್‌ನಿಂದ ಸಮಯ ಸಮಯಕ್ಕೆ ಒದಗಿಸಲಾಗುತ್ತಿರುವ ಅಥವಾ ಒದಗಿಸುವ ಪ್ರಸ್ತಾವನೆ ಹೊಂದಿದ್ದು ಎಪ್ಲಿಕೇಶನ್‌ನಲ್ಲಿ ಉಪಲಬ್ಧವಿರುವಂತೆ ಪ್ರತಿಯೊಂದು ವೈಶಿಷ್ಟ್ಯಗಳು ಅಥವಾ ಸೌಲಭ್ಯಗಳಿಗಾಗಿ ಉಪಯೋಗಿಸುವವರು ತನ್ನ ವಿವರಗಳನ್ನು ನೋಂದಾಯಿಸಿಕೊಳ್ಳಬೇಕು.

4. ವಾಲೆಟ್‌ನ್ನು ಪಡೆಯಲು ಮತ್ತು/ಅಥವಾ ಸಕ್ರಿಯಗೊಳಿಸುವುದಕ್ಕೆ ಒಂದು ಪೂರ್ವ-ನಿಬಂಧನೆಯಾಗಿ ಉಪಯೋಗಿಸುವವರು ಯುಐಡಿಎಐ (ಯೂನಿಟ್ ಐಡೆಂಟಿಫಿಕೇಶನ್ ಆಥಾರಿಟಿ ಆಫ್ ಇಂಡಿಯಾ) ಯಿಂದ ನೀಡಲಾದ ಆಧಾರ್ ನಂಬರ್ ಅಥವಾ ಯಸ್ ಬ್ಯಾಂಕ್ ಖಾತೆದಾರರಿಗೆ ನೀಡಲಾದ ಕಷ್ಟಮರ್ ಐಡಿಯನ್ನು ಒದಗಿಸಬೇಕಾಗಿದ್ದು ಇದನ್ನು ವನ್ ಟೈಮ್ ಪಾಸ್‌ವರ್ಡನಿಂದ (ಒಟಿಪಿ) ಊರ್ಜಿತಗೊಳಿಸಲಾಗುತ್ತದೆ. ಆಧಾರ್ ನಂಬರ್ ಅಥವಾ ಕಸ್ಟ್ ಐಡಿಯನ್ನು ಯಶಸ್ವಿಯಾಗಿ ಊರ್ಜಿತಗೊಳಿಸಿದ ನಂತರ ವಾಲೆಟ್‌ನ ನೋಂದಾವಣೆಗಾಗಿ ಆಧಾರ್ ಅಥವಾ ಕಸ್ಟ್‌ಐಡಿಯ ವಿರುದ್ಧ ಹೆಸರು, ವಿಳಾಸ ಮುಂತಾದ ಡೆಮೊಗ್ರಾಫಿಕ್ ವಿವರಗಳನ್ನು ಪರಿಗಣಿಸಲಾಗುತ್ತದೆ. ಸದ್ಯಕ್ಕೆ ವಾಲೆಟ್ ಉಪಯೋಗಿಸುವವರು. ಆಧಾರ್ ನಂಬರ್ ಅಥವಾ ಯಸ್ ಬ್ಯಾಂಕ್ ಕಸ್ಟಮರ್ ಐಡಿ (ಯಸ್ ಬ್ಯಾಂಕಿನಿಂದ ನೀಡಲಾಗದಂತೆ)ಯನ್ನು ವಾಲೆಟನ್ನು ನೀಡಿದ ತಾರೀಖಿನಿಂದ 1 (ಒಂದು) ವರ್ಷದೊಳಗೆ ಊರ್ಜಿತಗೊಳಿಸಲು ವಿಫಲವಾಗುವವರಿಗೆ, ಉಪಯೋಗಿಸುವವರಿಗೆ ಯಾವುದೇ ಮುಂದಿನ ಸೂಚನೆ ನೀಡಿದೆ ಅಥವಾ ಯಸ್ ಬ್ಯಾಂಕ್‌ನ ಪರವಾಗಿ ಯಾವುದೇ ಪ್ರಕಾರದ ಅಪಾಯ, ಜವಾಬ್ದಾರಿ ಅಥವಾ ಬಾಧ್ಯತೆ ಇಲ್ಲದೆ ಇಂತಹ ವಾಲೆಟ್‌ಗಳನ್ನು ಡಿಸೇಬಲ್ ಮಾಡುವ ಸಂಪೂರ್ಣ ಹಕ್ಕು ಮತ್ತು ವಿವೇಚನೆಯನ್ನು ಯಸ್ ಬ್ಯಾಂಕ್ ಹೊಂದಿದೆ.

5. ವಾಲೆಟ್‌ನ ಉಪಯೋಗವು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟದೆ ಎಂದು ಉಪಯೋಗಿಸುವವರು ಬೇಷರತ್ತಾಗಿ ಒಪ್ಪುತ್ತಾರೆ ಮತ್ತು ದೃಢೀಕರಿಸುತ್ತಾರೆ (ಅ) ಉಪಯೋಗಿಸುವವರ ಯಶಸ್ವಿನೊಂದಾವಣೆಯಾದಾಗ, ಸಮಯ ಸಮಯಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ)ನಿಂದ ಅನುಮತಿಸಲಾದ ಡಿಫಾಲ್ಟ್ ಮಿತಿಗಳು ಎಲ್ಲಾ ವಾಲೆಟ್‌ಗಳಿಗೆ ಅನ್ವಯಿಸುತ್ತದೆ. ಈ ಮಿತಿಗಳು ಎಲ್ಲಾ ಭಾಗಿದಾರಿ ವಾಲೆಟ್ಸ್‌ನಾದ್ಯಂತ ಅನ್ವಯವಾಗುವ ಸಂಚಯಿತ ಮಿತಿಗಳಾಗಿವೆ. (ಆ) ವಾಲೆಟ್‌ನಿಂದ ಉಪಯೋಗಿಸುವವರ ಬ್ಯಾಂಕ್ ಖಾತೆಗೆ ವರ್ಗಾವಣೆಗಾಗಿ, ಉಪಯೋಗಿಸುವವರು ಎಪ್ಲಿಕೇಶನ್‌ನಲ್ಲಿ ಲಾಭಾರ್ಥಿಯಾಗಿ ಬ್ಯಾಂಕ್ ಖಾತೆಗಳ ವಿವರಗಳನ್ನು ಸೇರಿಸಬೇಕು. ಯಸ್ ಬ್ಯಾಂಕ್ ಕೂಲಿಂಗ್ ಅವಧಿಯನ್ನು (ತಾಸುಗಳು: ನಿಮಿಷಗಳಲ್ಲಿ) ಪರಿಚಯಿಸಬಹುದಾಗಿದ್ದು, ಅದರ ನಂತರ, ಲಾಭಾರ್ಥಿಯ ಖಾತೆಗಳಿಗೆ ವರ್ಗಾವಣೆಯನ್ನು ಸಾಧ್ಯವಾಗಿಸಬಹುದಾಗಿದೆ. ಯಸ್ ಬ್ಯಾಂಕ್ ನಿರ್ದಿಷ್ಟವಾದ ಉಪಯೋಗಿಸುವವರಿಂದ ಸೇರಿಸಬಹುದಾದ ಗರಿಷ್ಠ ಲಾಭಾರ್ಥಿಗಳ ಮೇಲೆ ಒಂದು ಮಿತಿಯನ್ನು ಕೂಡಾ ಹೇರಬಹುದು. (ಇ) ಆರ್‌ಬಿಐಯಿಂದ ಕಡ್ಡಾಯಗೊಳಿಸಲಾದಂತೆ ಸಕ್ರಿಯಗೊಳಿಸಿದ ಮತ್ತು/ಅಥವಾ ವಾಲೆಟನ್ನು ಪಡೆದ ತಾರೀಖಿನಿಂದ 1 (ಒಂದು) ವರ್ಷದೊಳಗೆ ಉಪಯೋಗಿಸುವವರು ಸಂಪೂರ್ಣ ಕೆವೈಸಿ (ನೋ ಯುವರ್ ಕಷ್ಟಮರ್)ಯನ್ನು ಪೂರ್ಣಗೊಳಿಸಬೇಕು. ಒಂದು ವೇಳೆ ಯಾವುದನ್ನೂ ಪೂರ್ಣಗೊಳಿಸದಿದ್ದರೆ ಅಥವಾ ಕೆವೈಸಿ ಪ್ರಕ್ರಿಯೆಯನ್ನು ಪೂರ್ಣಗೊಳಿಸದಿದ್ದರೆ, ಉಪಯೋಗಿಸುವವರಿಗೆ ಯಾವುದೇ ಹೆಚ್ಚಿನ ಸೂಚನೆ ನೀಡದೆ ಅಥವಾ ಯಸ್ ಬ್ಯಾಂಕ್‌ನ ಪರವಾಗಿ ಯಾವುದೇ ಪ್ರಕಾರದ ಅಪಾಯ, ಜವಾಬ್ದಾರಿ ಅಥವಾ ಬಾಧ್ಯತೆ ಇಲ್ಲದೆ ಇಂತಹ ವಾಲೆಟ್‌ಗಳನ್ನು ಡಿಸೇಬಲ್ ಮಾಡುವ ಮತ್ತು ರದ್ದುಪಡಿಸುವ ಸಂಪೂರ್ಣ ಹಕ್ಕು ಯಸ್ ಬ್ಯಾಂಕ್‌ಗಿದೆ. ಯಸ್ ಬ್ಯಾಂಕ್‌ಗೆ ತೃಪ್ತಿಯಾಗುವಂತೆ ಕೆವೈಸಿ ಪ್ರಕ್ರಿಯೆನ್ನು ಪೂರ್ಣಗೊಳಿಸಿದರೆ ಮಾತ್ರ ವಾಲೆಟ್‌ಗೆ ಅಥವಾ ಅದರಿಂದ ಎಲ್ಲಾ ಕ್ರೆಡಿಟ್‌ಗಳಿಗೆ, ಡೆಬಿಟ್‌ಗಳಿಗೆ ಅಥವಾ ವರ್ಗಾವಣೆಗೆ ಅನುವು ಮಾಡಲಾಗುತ್ತದೆ. ಈ ಬಗ್ಗೆ ಯಸ್ ಬ್ಯಾಂಕ್‌ನ ನಿರ್ಧಾರವೇ ಅಂತಿಮವಾಗಿದೆ ಮತ್ತು ಉಪಯೋಗಿಸುವವರಿಗೆ ಅನ್ವಯಲಾಗುತ್ತದೆ.

6. ವರ್ಚುವಲ್ ಕಾರ್ಡ್ ಇದು ಸಮಯ ಸಮಯಕ್ಕೆ www.yesbank.inಇಲ್ಲಿ ಉಪಲಬ್ಧವಿರುವ ಮತ್ತು ಪರಿಷ್ಕರಿಸಲಾದ ವರ್ಚುವಲ್ ಕಾರ್ಡ್‌ನ ನಿಯಮ ಮತ್ತು ನಿಬಂಧನೆಗಳಂತೆ ಇರುತ್ತದೆ ಮತ್ತು ವರ್ಚುವಲ್ ಕಾರ್ಡ್‌ನಲ್ಲಿನ ಬ್ಯಾಲೆನ್ಸ್ ವಾಲೆಟ್‌ಗೆ ಸಮನಾಗಿದೆ ಎಂದು ಉಪಯೋಗಿಸುವವರು ಒಪ್ಪಿಕೊಳ್ಳುತ್ತಾರೆ ಮತ್ತು ದೃಢೀಕರಿಸುತ್ತಾರೆ.

7. ಎಪ್ಪಿಕೇಶನ್‌ನ ಮೂಲಕ ಕ್ರೆಡಿಟ್ ಕಾರ್ಡ್ ಸೌಲಭ್ಯವನ್ನು ಪಡೆಯಲು ಉಪಯೋಗಿಸುವವರು ಈ ಮುಂದಿನ ಆವಶ್ಯಕತೆಗಳನ್ನು ಪೂರ್ಣಗೊಳಿಸಬೇಕೆಂದು ಉಪಯೋಗಿಸುವವರು ಒಪ್ಪಿಕೊಳ್ಳುತ್ತಾರೆ ಮತ್ತು ದೃಡೀಕರಿಸುತ್ತಾರೆ (ಅ) ಉಪಯೋಗಿಸುವವರು ಊರ್ಜಿತವಾದ ಒಂದು ಎಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ನ್ನು ಹೊಂದಿರಬೇಕು (ಆ) ಉಪಯೋಗಿಸುವವರು ಇಂತಹ ಕ್ರೆಡಿಟ್ ಕಾರ್ಡ್ ವಿವರಗಳನ್ನು ಎಪ್ಪಿಕೇಶನ್‌ನಲ್ಲಿ ನೋಂದಾಯಿಸಿರಬೇಕು.

8. ಎಪ್ಲಿಕೇಶನ್‌ನ ಮೂಲಕ ಟ್ರಾವೆಲ್ ಟ್ರಾವೆಲ್ ಕಾರ್ಡ್ ಸೌಲಭ್ಯವನ್ನು ಪಡೆಯಲು, ಉಪಯೋಗಿಸುವವರು ಈ ಮುಂದಿನ ಆವಶ್ಯಕತೆಗಳನ್ನು ಪೂರ್ಣಗೊಳಿಸಬೇಕೆಂದು ಉಪಯೋಗಿಸುವವರು ಒಪ್ಪಿಕೊಳ್ಳುತ್ತಾರೆ ಮತ್ತು ದೃಢೀಕರಿಸುತ್ತಾರೆ: (ಅ) ಉಪಯೋಗಿಸುವವರು ಒಂದು ಊರ್ಜಿತ ಟ್ರಾವೆಲ್ ಕಾರ್ಡ್‌ನ್ನು ಹೊಂದಿರಬೇಕು (ಆ) ಉಪಯೋಗಿಸುವವರು ಇಂತಹ ಊರ್ಜಿತ ಟ್ರಾವೆಲ್ ಕಾರ್ಡ್‌ನ ವಿವರಗಳನ್ನು ಎಪ್ಲಿಕೇಶನ್‌ನಲ್ಲಿನೋಂದಾಯಿಸಿರಬೇಕು.

9. ಸೌಲಭ್ಯಗಳನ್ನು ಪಡೆಯುವ ಉದ್ದೇಶಕ್ಕಾಗಿ ಈ ಮುದಿನದಕ್ಕೆ ಉಪಯೋಗಿಸುವವರು ಒಪ್ಪಿಕೊಳ್ಳುತ್ತಾರೆ ಮತ್ತು ದೃಢೀಕರಿಸುತ್ತಾರೆ (ಅ) ಎಪ್ಲಿಕೇಶನ್ ಮಿತ್ರರ ಪಟ್ಟಿ, ಮೊಬ್ಬಾಲ್ ನಂಬರ್ ಮತ್ತು ಇಮೈಲ್ ಐಡಿಗಳನ್ನು ಪಡೆಯಲು ಉಪಯೋಗಿಸುವವರ ಸಾಮಾಜಿಕ ಪ್ರೊಫೈಲ್‌ನ್ನು ತಲುಪುತ್ತದೆ ಮತ್ತು ಉಪಯೋಗಿಸುವವರ ನಿರ್ದಿಷ್ಟ ಕೋರಿಕೆಯಂತೆ ಎಪ್ಲಿಕೇಶನ್‌ಗೆ ಸೇರಿಕೊಳ್ಳಲು ಇಂತಹ ಮೂರನೇ ಪಾರ್ಟಿ ಬಳಕೆದಾರರಿಗೆ ಕೋರಿಕೆಗಳನ್ನು ಕಳುಹಿಸಿ ಕೊಡುತ್ತದೆ (ಆ) ಎಪ್ಲಿಕೇಶನ್, ಉಪಯೋಗಿಸುವವರ ವಿಶೇಷ ಪ್ರೊಫೈಲ್, ಮೊಬ್ಬಾಲ್ ನಂಬರ್ ಮತ್ತು ಇಮೈಲ್ ಐಡಿಗೆ ನೋಟಿಫಿಕೇಶನ್ ಕಳುಹಿಸುತ್ತದೆ (ಇ) ಉಪಯೋಗಿಸುವವರು ಎಪ್ಲಿಕೇಶನ್‌ನಲ್ಲಿ ತನ್ನ ಬ್ಯಾಂಕ್ ವಿವರಗಳನ್ನು ಸೇರಿಸಬಹುದು. (ಈ) ಉಪಯೋಗಿಸುವವರ ಯಸ್ ಬ್ಯಾಂಕ್ ಅಥವಾ ಇತರ ಬ್ಯಾಂಕ್ ವಿವರಗಳನ್ನು ಯಸ್ ಬ್ಯಾಂಕ್‌ನ ಸಂಪೂರ್ಣ

ವಿವೇಚನೆಯಂತೆ ನಿರ್ದಿಷ್ಟಪಡಿಸಲಾದ ಸಮಯ ಮತ್ತು ಕಾಲಾವಧಿಗಾಗಿ ಯಸ್ ಬ್ಯಾಂಕ್ ಸರ್ವರ್ ಡಾಟಾ ಬೇಸ್‌ನಲ್ಲಿ ಶೇಖರಿಸಲಾಗುತದೆ (ಉ) ಉಯೋಗಿಸುವವರು ಯಸ್ ಬ್ಯಾಂಕ್‌ನಿಂದ ನೀಡಲಾದ ಸೌಲಭ್ಯಗಳಡಿಯಲ್ಲಿ ಯಾವುದೇ ನಿಧಿ ವರ್ಗಾವಣೆ ಮಾಡಲು ಯಸ್ ಬ್ಯಾಂಕ್‌ನಿಂದ ನಿಗದಿಪಡಿಸಲಾದ ಮಿತಿಯನ್ನು ಪಾಲಿಸುತ್ತಾರೆ.

10. ಉಪಯೋಗಿಸುವವರಿಂದ ಯಸ್ ಬ್ಯಾಂಕ್‌ಗೆ ನೀಡಲಾದ ಯಾವುದೇ ನಿರ್ದೇಶನಗಳನ್ನು, ಸೌಲಭ್ಯಗಳನ್ನು ಉಪಯೋಗಿಸಲು, ಉಪಯೋಗಿಸುವವರಿಂದ ಒಟಿಪಿ/ಪಾಸ್‌ಕೋಡ್/ಪಾಸ್‌ವರ್ಡ್‌ನ್ನು ಊರ್ಜಿತಗೊಳಿಸಿದ ನಂತರವೇ ಕಾರ್ಯಾನ್ವಿತಗೊಳಿಸಲಾಗುತ್ತದೆ ಎಂದು ಉಪಯೋಗಿಸುವವರು ದೃಢೀಕರಿಸುತ್ತಾರೆ.

11. ವ್ಯವಹಾರವು ಪೂರ್ಣಗೊಂಡ ನಂತರ, ಉಪಯೋಗಿಸುವವರಿಂದ ನೀಡಲಾಗುವ ಯಾವುದೇ ಸ್ಟಾಪ್ ಪೇಮೆಂಟ್ ನಿರ್ದೇಶನಗಳನ್ನು ಯಸ್ ಬ್ಯಾಂಕ್‌ನಿಂದ ಸ್ವೀಕರಿಸಲಾಗುವುದಿಲ್ಲ ಮತ್ತು /ಅಥವಾ ಅದನ್ನು ಕಾರ್ಯಾನ್ವಿತಗೊಳಿಸುವುದಿಲ್ಲ ಎಂದು ಉಪಯೋಗಿಸುವವರು ಒಪ್ಪಿಕೊಳ್ಳುತ್ತಾರೆ ಮತ್ತು ದೃಢೀಕರಿಸುತ್ತಾರೆ.

12. ಒಂದು ನಿರ್ದಿಷ್ಟವಾದ ವಿಪಿಎಯ ಲೊಕೇಶನ್, ನಿರ್ದಿಷ್ಟವಾದ ವಿಪಿಎಯ ಉಪಲಬ್ಧತೆಗೆ ಒಳಪಟ್ಟಿದೆ ಮತ್ತು ಯಸ್ ಬ್ಯಾಂಕ್‌ನ ಸಂಪೂರ್ಣ ವಿವೇಚನೆಗೆ ಸೇರಿದೆ ಎಂದು ಉಪಯೋಗಿಸುವವರು ಒಪ್ಪಿಕೊಳ್ಳುತ್ತಾರೆ ಮತ್ತು ದೃಢೀಕರಿಸುತ್ತಾರೆ. ಯಸ್ ಬ್ಯಾಂಕ್ ವಿಪಿಎಯ ಯಾವುದೇ ನಕಲಿಗೆ ಅನುವು ಮಾಡುವುದಿಲ್ಲ ಅಥವಾ ಅದೇ ವಿಪಿಎಯನ್ನು ಅನೇಕರಿಗೆ ಅಲಾಟ್ ಮಾಡುವುದಿಲ್ಲ ಎಂದು ಉಪಯೋಗಿಸುವವರು ಒಪ್ಪಿಕೊಳ್ಳುತ್ತಾರೆ.

13. ಸೌಲಭ್ಯವನ್ನು ಉಪಯೋಗಿಸುವಾಗ ಉಪಯೋಗಿಸುವವರು ಈ ಮುಂದಿನವುಗಳನ್ನು ಖಾತ್ರಿಮಾಡಿಕೊಳ್ಳುತ್ತಾರೆ (1) ಉಪಯೋಗಿಸುವವರು ಸೌಲಭ್ಯಗಳನ್ನು ತಲುಪುವ ಮತ್ತು ಪಡೆಯುವ ಅಧಿಕಾರ ಹೊಂದಿದ್ದಾರೆ. (2) ಉಪಯೋಗಿಸುವವರು ಇಂತಹ ಸೌಲಭ್ಯಗಳಿಗೆ ಸಂಬಂಧಿಸಿ ಭಾರತದಲ್ಲಿ ಪ್ರಸ್ತುತವಿರುವ ಅನ್ವಯವಾಗುವ ಕಾನೂನುಗಳನ್ನು ಮತ್ತು ನಿಯಂತ್ರಣಗಳನ್ನು ಪಾಲಿಸಿದ್ದಾರೆ. (3) ಉಪಯೋಗಿಸುವವರು, ಉಪಯೋಗಿಸುವವರಿಗೆ ಸೌಲಭ್ಯವನ್ನು ಒದಗಿಸಲು ಯಸ್ ಬ್ಯಾಂಕ್‌ಗೆ ಆವಶ್ಯಕವಾದ ಇಂತಹ ಎಲ್ಲಾ ಮಾಹಿತಿ ಮತ್ತು/ಅಥವಾ ಸಹಕಾರವನ್ನು ಯಸ್ ಬ್ಯಾಂಕ್‌ಗೆ ಒದಗಿಸಿದ್ದಾರೆ. (4) ಉಪಯೋಗಿಸುವವರು ಸಮಯ ಸಮಯಕ್ಕೆ ಅಲಾಟ್ ಮಾಡಲಾದ ಪಾಸ್‌ವರ್ಡ್, ಖಾತೆ ನಂಬರ್ ಇವನ್ನೊಳಗೊಂಡು ಯಾವುದೇ ಸಮಯದಲ್ಲಿ ಯಾರೇ ವ್ಯಕ್ತಿಗೆ ಯಸ್ ಬ್ಯಾಂಕ್‌ನಲ್ಲಿ ಅಥವಾ ಇತರ ಬ್ಯಾಂಕ್‌ನಲ್ಲಿ ಹೊಂದಿರುವ ಖಾತೆಯ ವಿವರಗಳನ್ನು ನೀಡುವುದಿಲ್ಲ.

14. ಸೌಲಭ್ಯಗಳಿಗಾಗಿ ಯಸ್ ಬ್ಯಾಂಕ್ ಕೇವಲ ಸೌಲಭ್ಯ ಒದಗಿಸುವವರಾಗಿ ಇರುತ್ತಾರೆ ಮತ್ತು ಸೌಲಭ್ಯಗಳಿಗೆ ಯಸ್ ಬ್ಯಾಂಕ್ ಯಾವುದೇ ಜವಾಬ್ದಾರಿಯನ್ನು ಸ್ವೀಕರಿಸುವುದಿಲ್ಲ ಅಥವಾ ಕ್ಲೈಮ್‌ನ್ನು ಮಾಡುವುದಿಲ್ಲ ಅಥವಾ ಯಸ್ ಬ್ಯಾಂಕ್ ಇಂತಹ ಯಾವುದೇ ಸೌಲಭ್ಯಗಳನ್ನು ಅಥವಾ ಮೂರನೇ ಪಾರ್ಟಿ ಮರ್ಚಂಟ್‌ರ ಸ್ಟ್ಯಾಂಡಿಂಗ್ ಅಥವಾ ಪ್ರತಿಷ್ಠೆಯನ್ನು ಅನುಮೋದಿಸುವುದಿಲ್ಲ ಎಂದು ಉಪಯೋಗಿಸುವವರು ಸ್ವೀಕರಿಸುತ್ತಾರೆ ಮತ್ತು ಒಪ್ಪಿಕೊಳ್ಳುತ್ತಾರೆ.

15. ಸೌಲಭ್ಯಗಳಿಗಾಗಿ ವಿಧಿಸಲಾಗುವ ಯಾವುದೇ ಅಥವಾ ಎಲ್ಲಾ ಶುಲ್ಕಗಳು ಯಸ್ ಬ್ಯಾಂಕ್ ಸಂಪೂರ್ಣ ವಿವೇಚನೆಗೆ ಒಳಪಟ್ಟಿದೆ ಎಂದು ಉಪಯೋಗಿಸುವವರು ಸ್ವೀಕರಿಸುತ್ತಾರೆ ಮತ್ತು ಒಪ್ಪಿಕೊಳ್ಳುತ್ತಾರೆ.ಉಪಯೋಗಿಸುವವರಿಗೆ ಯಾವುದೇ ಸೂಚನೆ ಅಥವಾ ತಿಳುವಳಿಕೆ ನೀಡದೆ ಅವನ್ನು ಹಿಂತೆಗೆದುಕೊಳ್ಳುವ ಅಥವಾ ಪರಿವರ್ತಿಸುವ ಅಥವಾ ಸಮಯ ಸಮಯಕ್ಕೆ ಅದರಲ್ಲಿ ವ್ಯತ್ಯಾಸ ಮಾಡುವ ಸ್ವಾತಂತ್ರ್ಯ ಎಸ್ ಬ್ಯಾಂಕ್‌ಗೆ ಇದೆ.

16. ಯಾವುದೇ ರೀತಿಯ ಕಾರಣಕ್ಕಾಗಿ ಅವರ ಬ್ಯಾಂಕ್ ಖಾತೆಯನ್ನು ಮುಚ್ಚಲಾದರೆ ಅಥವಾ ಉಪಯೋಗ ಅಥವಾ ಸೌಲಭ್ಯದ ಬಳಕೆಗೆ ಸಂಬಂಧಿಸಿ ತಡೆಹಿಡಿಯಲಾದರೆ, ಉಪಯೋಗಿಸುವವರು ಸಮಸ್ಯೆಯನ್ನು ನೇರವಾಗಿ ಬ್ಯಾಂಕ್‌ನೊಂದಿಗೆ ಇತ್ಯರ್ಥ ಮಾಡಿಕೊಳ್ಳುತ್ತಾರೆ ಮತ್ತು ಇದಕ್ಕಾಗಿ ಯಸ್ ಬ್ಯಾಂಕ್‌ನ್ನು ಬಾಧ್ಯರನ್ನಾಗಿ ಅಥವಾ ಜವಾಬ್ದಾರರನ್ನಾಗಿ ಮಾಡುವುದಿಲ್ಲ ಎಂದು ಉಪಯೋಗಿಸುವವರು ಸ್ವೀಕರಿಸುತ್ತಾರೆ ಮತ್ತು ಒಪ್ಪಿಕೊಳ್ಳುತ್ತಾರೆ. ಯಸ್ ಬ್ಯಾಂಕ್‌ನಿಂದ ಮರುಪಾವತಿಸಲಾದ ಯಾವುದೇ

ಹಣವು ಉಪಯೋಗಿಸುವವರಿಗೆ ಒದಗಿಸಲಾದ ಬಡ್ಡಿ ರಹಿತ ಸೌಲಭ್ಯದಂತೆ ಅನ್ವಯವಾಗುವಂತೆ ಬಡ್ಡಿಯನ್ನು ಒಳಗೊಂಡಿರುವುದಿಲ್ಲ ಅಥವಾ ಹೊಂದಿರುವುದಿಲ್ಲ.

17. ಉಪಯೋಗಿಸುವವರು ಇವನ್ನು ಸ್ವೀಕರಿಸುತ್ತಾರೆ ಮತ್ತು ಒಪ್ಪಿಕೊಳ್ಳುತ್ತಾರೆ (1) ಯಸ್ ಬ್ಯಾಂಕ್ ಪೇ ಪಾವತಿನಲ್ಲಿ ಕಾಪಾಡಿಕೊಳ್ಳಲಾದ ಬಾಲೆನ್ಸ್‌ಗೆ ಅಥವಾ ಉಪಯೋಗಿಸುವವರಿಂದ ಉಪಯೋಗಿಸಲಾದ ಅಥವಾ ಕಾಪಾಡಿಕೊಂಡ ಎಪ್ಲಿಕೇಶನ್‌ಗೆ ಯಸ್ ಬ್ಯಾಂಕ್‌ನಿಂದ ಬಡ್ಡಿ ಪಾವತಿಸಲಾಗುವುದಿಲ್ಲ. (2) ಎಪ್ಲಿಕೇಶನ್‌ನ ಬಗ್ಗೆ ಉಪಯೋಗಿಸುವವರಿಂದ ಯಾವುದೇ ರೆಫರಲ್‌ಗಳಿಗಾಗಿ ಯಸ್ ಬ್ಯಾಂಕ್‌ನಿಂದ ಹಣ ರೂಪದ ಅಥವಾ ಅನ್ಯಥಾ ಪ್ರೋತ್ಸಾಹಕವನ್ನು ಪಾವತಿಸಲಾಗುವುದಿಲ್ಲ ಮತ್ತು ಇಂತಹ ಯಾವುದೇ ರೆಫರಲ್ಸ್‌ನ ವಿರುದ್ಧ ಸ್ವೀಕರಿಸಲಾದ ಯಾವುದೇ ದೂರುಗಳಿಗೆ ಯಸ್ ಬ್ಯಾಂಕ್ ಜವಾಬಾದರರಲ್ಲ(3) ಉಪಯೋಗಿಸವವರಿಂದ ಇರಿಸಲಾದ ಗುರಿಯ ವಿರುದ್ಧ ಕಡಿತ ಮಾಡಲಾದ ಮೊತ್ತದ ಮೇಲೆ ಯಸ್ ಬ್ಯಾಂಕ್‌ನಿಂದ ಬಡ್ಡಿಯನ್ನು ಪಾವತಿಸಲಾಗುವುದಿಲ್ಲ. (4) ಅದನ್ನು ಕಾರ್ಯಾನ್ವಿತಗೊಳಿಸಲು ಸಾಕಷ್ಟು ಬ್ಯಾಲೆನ್ಸ್ ಇದ್ದದೆ ಡ್ಯೂ ತಾರೀಖಿನಂದು ಎಲ್ಲಾ ನಿಗದಿತ ವ್ಯವಹಾರಗಳನ್ನು ರಾತ್ರಿ 12 ಐಎಸ್‌ಡಿಯಲ್ಲಿ ಕಾರ್ಯಾನ್ವಿತಗೊಳಿಸಲಾಗುತ್ತದೆ.

18. ಉಪಯೋಗಿಸುವವರು  ಎಪ್ಲಿಕೇಶನ್‌ನಲ್ಲಿ ಯಸ್ ಬ್ಯಾಂಕ್‌ನಿಂದ ತಿಳಿಸಲಾದ ವಿಧಾನದ ಬದಲು ಇತರ ವಿಧಾನಗಳಿಂದ ಹಣವನ್ನು ಲೋಡ್ ಮಾಡಲು ಪ್ರಯತ್ನಿಸಿದಲ್ಲಿ, ಮೊತ್ತ ಅಥವಾ ಹಣವನ್ನು ಎಪ್ಲಿಕೇಶನ್‌ನಲ್ಲಿ ಲೋಡ್ ಮಾಡದೆ ಇರಬಹುದು ಮತ್ತು ಯಸ್ ಬ್ಯಾಂಕ್ ಇಂತಹ ಮೊತ್ತ ಅಥವಾ ಹಣವನ್ನು, ಇಂತಹ ಮೊತ್ತ ಅಥವಾ ಹಣ ಯಸ್ ಬ್ಯಾಂಕ್‌ನಿಂದ ಸ್ವೀಕರಿಸಲಾದ ತಾರೀಖಿನಿಂದ 21 ಕೆಲಸ ದಿನದೊಳಗೆ ಮರುಪಾವತಿಸುತ್ತದೆ ಎಂದು ಉಪಯೋಗಿಸುವವರು ಸ್ವೀಕರಿಸುತ್ತಾರೆ ಮತ್ತು ಒಪ್ಪಿಕೊಳ್ಳುತ್ತಾರೆ.

19. ಒಂದು ವೇಳೆ ಉಪಯೋಗಿಸುವವರ ಹೆಸರು, ನಿಯಂತ್ರಕರು ಅಥವಾ ಸರಕಾರದಿಂದ ಪ್ರಕಟಿಸಲಾದ ನಕಾರಾತ್ಮಕ ಪಟ್ಟಿಯಲ್ಲಿ ಕಾಣಿಸಿಕೊಂಡರೆ, ಯಸ್ ಬ್ಯಾಂಕ್ ಇಂತಹ ಉಪಯೋಗಿಸುವವರಿಗೆ ನೀಡಲಾದ ಅಥವಾ ಅವರಿಂದ ಪಡೆದುಕೊಳ್ಳಲಾದ ಎಪ್ಲಿಕೇಶನ್‌ನ್ನು ಅಮಾನತುಗೊಳಿಸುವುದು ಅಥವಾ ಕೊನೆಗೊಳಿಸುವುದನ್ನು ಒಳಗೊಂಡು ಆದರೆ ಇದಕ್ಕೆ ಮಾತ್ರ ಸೀಮಿತಗೊಳ್ಳದೆ, ಸೂಕ್ತವೆಂದು ಕಂಡಂತೆ ಕ್ರಮ ಕೈಗೊಳ್ಳಬಹುದು ಎಂದು ಉಪಯೋಗಿಸುವವರು ಸ್ವೀಕರಿಸುತ್ತಾರೆ ಮತ್ತು ಒಪ್ಪಿಕೊಳ್ಳುತ್ತಾರೆ.

20. ವಾಲೆಟ್ ಉಪಯೋಗಿಸಿ ಒಂದು (01) ವರ್ಷದ ನಿರಂತರ ಅವಧಿಗಾಗಿ ಉಪಯೋಗಿಸುವವರು ಆರ್ಥಿಕ ವ್ಯವಹಾರವನ್ನು ಪೂರ್ಣಗೊಳಿಸದಿದ್ದರೆ ಉಪಯೋಗಿಸುವವರ ವಾಲೆಟ್‌ನಲ್ಲಿರುವ ಎಲ್ಲಾ ಕ್ರೆಡಿಟ್ ವ್ಯವಹಾರಗಳನ್ನು (ವಾಲೆಟ್‌ನ ಲೋಡಿಂಗ್) ಯಸ್ ಬ್ಯಾಂಕ್‌ನ ಸಂಪೂರ್ಣ ವಿವೇಚನೆಯಂತೆ ನಿರ್ಬಂಧಿಸಲಾಗುತ್ತದೆ ಎಂದು ಉಪಯೋಗಿಸುವವರು ಸ್ವೀಕರಿಸುತ್ತಾರೆ ಮತ್ತು ಒಪ್ಪಿಕೊಳ್ಳುತ್ತಾರೆ. ಸಮಯ ಸಮಯಕ್ಕೆ ಬ್ಯಾಂಕ್‌ನಿಂದ ವ್ಯಾಖ್ಯಾನಿಸಲಾದಂತೆ ಊರ್ಜಿತತೆ ಮತ್ತು ಮಾಡಬೇಕಾದ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ನಂತರವೇ ವಾಲೆಟ್‌ನ್ನು ಮರು ಸಕ್ರಿಯಗೊಳಿಸಲಾಗುತ್ತದೆ. ಉಪಯೋಗಿಸುವವರು ಯಸ್ ಬ್ಯಾಂಕ್‌ನಿಂದ ಒದಗಿಸಲಾದ ಎಪ್ಲಿಕೇಶನ್‌ನ ಮೂಲಕ ಮಾಡಲಾದ ಯಾವುದೇ ಮತ್ತು ಎಲ್ಲಾ ವ್ಯವಹಾರಗಳಿಗೆ ಜವಾಬ್ದಾರಾಗಿರುತ್ತಾರೆ. ಯಸ್ ಬ್ಯಾಂಕ್ ಯಾವುದೇ ಸಮಯದಲ್ಲಿ ಉಪಯೋಗಿಸುವವರಿಂದ ಇಲ್ಲಿ ನಮೂದಿಸಲಾಗಿರುವ ನಿಯಮ ಮತ್ತು ನಿಬಂಧನೆಗಳ ಉಲ್ಲಂಘನೆಯಾದಲ್ಲಿ, ಯಾವುದೇ ಪೂರ್ವ ಸೂಚನೆ ನೀಡದೆ ಅಥವಾ ಉಪಯೋಗಿಸವವರ ಮೃತ್ಯು, ದಿವಾಳಿತನ, ಕಾನೂನಿನ ಕ್ಷಮತೆಯ ಕೊರತೆಯ ಬಗ್ಗೆ ಯಸ್ ಬ್ಯಾಂಕ್ ತಿಳಿದುಕೊಂಡರೆ ಅಥವಾ ಯಾವುದೇ ಕಾರಣಕ್ಕಾಗಿ ಯಸ್ ಬ್ಯಾಂಕ್ ಸೌಲಭ್ಯಗಳನ್ನು ಹಿಂತೆಗೆದುಕೊಳ್ಳಬಹುದು ಅಥವಾ ನಿಲ್ಲಿಸಬಹುದು ಎಂದು ಉಪಯೋಗಿಸುವವರು ಸ್ವೀಕರಿಸುತ್ತಾರೆ ಮತ್ತು ಒಪ್ಪಿಕೊಳ್ಳುತ್ತಾರೆ.

21. ಯಸ್ ಬ್ಯಾಂಕ್ ಸೌಲಭ್ಯವನ್ನು ಈ ಎಪ್ಲಿಕೇಶನ್‌ನ ಮೂಲಕ ಅದರ ಪರವಾಗಿ ನೇರವಾಗಿ ಅಥವಾ ತನ್ನ ಸಹಯೋಗಿಗಳು, ಪ್ರತಿನಿಧಿಗಳು, ಏಜೆಂಟರು ಅಥವಾ ಗುತ್ತಿಗೆ ಪಡೆದ ಸೇವೆ ಒದಗಿಸುವವರ ಮೂಲಕ ಒದಗಿಸಬಹುದು ಎಂದು ಉಪಯೋಗಿಸುವವರು ಸ್ವೀಕರಿಸುತ್ತಾರೆ ಮತ್ತು ಒಪ್ಪಿಕೊಳ್ಳುತ್ತಾರೆ.

22. ಸೌಲಭ್ಯಗಳಿಗೆ ಸಂಬಂಧಿಸಿ ಉಪಯೋಗಿಸುವವರಿಂದ ಯಸ್ ಬ್ಯಾಂಕ್‌ಗೆ ಒದಗಿಸಲಾದ ಮಾಹಿತಿಯಲ್ಲಿ ಯಾವುದೇ ದೋಷ ಅಥವಾ ಅಸಮಾನತೆಯು ಕಂಡುಬಂದರೆ ಅಥವಾ ಬಹಿರಂಗವಾದರೆ, ಇಂತಹ ಮಾಹಿತಿಯ ಸಂಪೂರ್ಣ ಹೊಣೆ, ಬಾಧ್ಯತೆ ಅಥವಾ ಜವಾಬ್ದಾರಿಯ ಉಪಯೋಗಿಸುವವರ ಮೇಲಿರುತ್ತದೆ ಎಂದು ಉಪಯೋಗಿಸುವವರು ಸ್ವೀಕರಿಸುತ್ತಾರೆ, ಒಪ್ಪಿಕೊಳ್ಳುತ್ತಾರೆ ಮತ್ತು ಸಮ್ಮತಿಸುತ್ತಾರೆ ಮತ್ತು ದೃಢೀಕರಿಸುತ್ತಾರೆ. ಒಂದು ವೇಳೆ ಯಸ್ ಬ್ಯಾಂಕ್‌ಗೆ ಪೂರೈಸಲಾದ ಮಾಹಿತಿಯಲ್ಲಿ ಯಾವುದೇ ದೋಷ ಅಥವಾ ತಪ್ಪು ಇದೆ ಅಥವಾ ಇತ್ತು ಎಂದು ಉಪಯೋಗಿಸುವವರಿಗೆ ಶಂಕೆ ಉಂಟಾದರೆ, ಉಪಯೋಗಿಸುವವರು ಕೂಡಲೇ ಯಸ್ ಬ್ಯಾಂಕ್‌ಗೆ ಸೂಚಿಸುತ್ತಾರೆ ಅಥವಾ ತಿಳಿಸುತ್ತಾರೆ . ಇಂತಹ ಮಾಹಿತಿ ಅಥವಾ ಸೂಚನೆಯನ್ನು ಪಡೆದಾಗ ಯಸ್ ಬ್ಯಾಂಕ್ ಅತ್ಯುತ್ತಮ ಪ್ರಯತ್ನದ ಆಧಾರದಲ್ಲಿ ತಕ್ಷಣ ದೋಷವನ್ನು ಸರಿಪಡಿಸಲು ಪ್ರಯತ್ನಿಸುತ್ತದೆ.

**ಹೆಚ್.ಕೊನೆಗೊಳಿಸುವಿಕೆ :**

1. ಉಪಯೋಗಿಸುವವರು ಇಲ್ಲಿ ನಮೂದಿಸಲಾದಂತೆ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದರೆ ಅಥವಾ ಉಪಯೋಗಿಸುವವರ ಮೃತ್ಯು , ದಿವಾಳಿತನ ಅಥವಾ ಕಾನೂನಿನ ಕ್ಷಮತೆಯ ಕೊರತೆಯ ಬಗ್ಗೆ ಯಸ್ ಬ್ಯಾಂಕ್‌ಗೆ ತಿಳಿದು ಬಂದರೆ, ಯಸ್ ಬ್ಯಾಂಕ್, ತನ್ನ ಸಂಪೂರ್ಣ ವಿವೇಚನೆಯಂತೆ, ಯಾವುದೇ ಸಮಯದಲ್ಲಿ, ಉಪಯೋಗಿಸುವವರಿಗೆ ಪೂರ್ವ ಸೂಚನೆ ನೀಡದೆ ಸೌಲಭ್ಯವನ್ನು ತಾತ್ಕಾಲಿಕವಾಗಿ ಅಥವಾ ಖಾಯಂ ಆಗಿ ಒಂದೋ ಸಂಪೂರ್ಣವಾಗಿ ಅಥವಾ ಭಾಗಶ: ಹಿಂತೆಗೆದುಕೊಳ್ಳಬಹುದು .

2. ಉಪಯೋಗಿಸುವವರ ಎಪ್ಲಿಕೇಶನ್‌ನ ಕೊನೆಗೊಳಿಸುವಿಕೆಯು ಸ್ವಯಂಚಾಲಿತವಾಗಿ ಸೌಲಭ್ಯಗಳನ್ನು ಕೊನೆಗೊಳಿಸುತ್ತದೆ ಎಂದು ಉಪಯೋಗಿಸುವವರು ಸ್ವೀಕರಿಸುತ್ತಾರೆ ಮತ್ತು ಒಪ್ಪಿಕೊಳ್ಳುತ್ತಾರೆ. ಉಪಯೋಗಿಸುವವರು ತಮ್ಮ ವಾಲೆಟ್‌ನ್ನು ಕೊನೆಗೊಳಿಸಲು ಸ್ವ ಇಚ್ಛೆಯಿಂದ ಆಯ್ಕೆ ಮಾಡಬಹುದು. ಒಂದು ವೇಳೆ ವಾಲೆಟ್‌ನ್ನು ಸ್ವ ಇಚ್ಛೆಯಿಂದ ಕೊನೆಗೊಳಿಸಿದರೆ, ವಾಲೆಟ್‌ನಲ್ಲಿನ ಬ್ಯಾಲೆನ್ಸ್ ಮೊತ್ತವನ್ನು ಉಪಯೋಗಿಸುವವರ ಪರಿಶೀಲಿಸಲಾದ (ಯಸ್ ಬ್ಯಾಂಕ್‌ನಿಂದ ಮಾಡಲಾದ ಬೇಸಿಸ್ ಪರಿಶೀಲನೆ) ಬ್ಯಾಂಕ್ ಖಾತೆಗೆ ಮಾತ್ರ ವರ್ಗಾಯಿಸಲಾಗುತ್ತದೆ. ಉಪಯೋಗಿಸುವವರು ಯಸ್ ಬ್ಯಾಂಕನಲ್ಲಿ ಹೊಂದಿರುವ ಖಾತೆ ವಿವರಗಳನ್ನು ಪರಿಶೀಲಿಸಲು ಸಾಧ್ಯವಾಗಲು ಬ್ಯಾಂಕ್ ಖಾತೆ ವಿವರಗಳನ್ನು (ಖಾತೆ ನಂಬರ್ ಮತ್ತು ಐಎಫ್‌ಎಸ್‌ಸಿ ಕೋಡ್) ಒದಗಿಸಲು ಬೇಷರತ್ತಾಗಿ ಒಪ್ಪಿಕೊಳ್ಳುತ್ತಾರೆ.

3. ಉಪಯೋಗಿಸುವವರಿಂದ ಕೊನೆಗೊಳಿಸುವ ಬಗ್ಗೆ ಕೋರಿಕೆ ಬಂದಾಗ, ಉಪಯೋಗಿಸುವವರ ಬ್ಯಾಂಕ್ ಖಾತೆಗೆ ವಾಸ್ತವಿಕ ಮೊತ್ತವನ್ನು ವರ್ಗಾಯಿಸುವ ಮೊದಲು ಯಸ್ ಬ್ಯಾಂಕ್ ಒಂದು ನಿರ್ದಿಷ್ಟವಾದ ಮೊತ್ತವನ್ನು *(ಬ್ಯಾಂಕ್‌ನ ಸಂಪೂರ್ಣ ವಿವೇಚನೆಯಂತೆ ನಿರ್ಧರಿಸಲಾದುದು ಮತ್ತು ಇಂತಹ ಕೋರಿಕೆಯ ಸಮಯದಲ್ಲಿ ಉಪಯೋಗಿಸುವವರಿಗೆ ತಿಳಿಸಲಾದುದು)* ಡೆಬಿಟ್ ಮಾಡಲು ಅರ್ಹವಾಗಿದೆ ಎಂದು ಉಪಯೋಗಿಸುವವರು ಸ್ವೀಕರಿಸುತ್ತಾರೆ ಮತ್ತು ಒಪ್ಪಿಕೊಳ್ಳುತ್ತಾರೆ. ವಾಸ್ತವಿಕ ಮೊತ್ತವನ್ನು ಉಪಯೋಗಿಸುವವರ ಬ್ಯಾಂಕ್ ಖಾತೆಗೆ ವರ್ಗಾಯಿಸುವ ಮತ್ತು/ಅಥವಾ ಹಾಕುವ ಮೊದಲು ಯಸ್ ಬ್ಯಾಂಕನಿಂದ ನಿರ್ದಿಷ್ಟಪಡಿಸಲಾದ ಪರಿಶೀಲನೆಯ ಪ್ರಕ್ರಿಯೆಗೆ ಉಪಯೋಗಿಸುವವರು ಬೇಷರತ್ತಾಗಿ ಮತ್ತು ಹಿಂತೆಗೆದುಕೊಳ್ಳಲಾಗದಂತೆ ಒಪ್ಪಿಕೊಳ್ಳುತ್ತಾರೆ.

4. ಅನ್ವಯವಾಗುವ ಕಾನೂನು ಮತ್ತು ನಿಯಂತ್ರಣದಲ್ಲಿ ಅನ್ಯಥಾ ಒದಗಿಸಲಾದವುಗಳ ಹೊರತಾಗಿ, ಸುರಕ್ಷತೆಯ ಸಮಸ್ಯೆಯ ಆಧಾರದಲ್ಲಿ ಯಾವುದೇ ಸಮಯದಲ್ಲಿ, ಉಪಯೋಗಿಸುವವರಿಗೆ ಪೂರ್ವ ಸೂಚನೆ ನೀಡದೆ ಸೌಲಭ್ಯಗಳನ್ನು ಕೊನೆಗೊಳಿಸುವ ಮತ್ತು/ಅಥವಾ ಈ ಸೌಲಭ್ಯವನ್ನು ಉಪಯೋಗಿಸಿ ಅನುವು ಮಾಡಲಾದ ಯಾವುದೇ ವ್ಯವಹಾರಗಳನ್ನು ವಿಸ್ತರಿಸುವ, ಕಡಿಮೆ ಮಾಡುವ ಅಥವಾ ಅಮಾನತುಗೊಳಿಸುವ ಸಂಪೂರ್ಣ ಹಕ್ಕನ್ನು ಎಸ್ ಬ್ಯಾಂಕ್ ಕಾದಿರಿಸಿಕೊಂಡಿದೆ.

5. ಯಸ್ ಬ್ಯಾಂಕ್ ತನ್ನ ಸಂಪೂರ್ಣ ವಿವೇಚನೆಯಂತೆ, ಯಾವುದೇ ಸಮಯದಲ್ಲಿ ಉಪಯೋಗಿಸುವವರಿಗೆ ಪೂರ್ವ ಸೂಚನೆ ನೀಡದೆ ಮತ್ತು ಯಾವುದೇ ಕಾರಣ ನೀಡದೆ ತಾತ್ಕಾಲಿಕವಾಗಿ ಸೌಲಭ್ಯವನ್ನು ಒಂದೋ ಸಂಪೂರ್ಣವಾಗಿ ಅಥವಾ ಭಾಗಶ: ಹಿಂತೆಗೆದುಕೊಳ್ಳಬಹುದು.

6. ಯಸ್ ಬ್ಯಾಂಕ್ ಯಾವುದೇ ಸಮಯದಲ್ಲಿ ಯಾವುದೇ ನಿರ್ವಹಣೆಯ ಕೆಲಸ ಅಥವಾ ಮಾಡಬೇಕಾದ ದುರಸ್ತಿಯ ಉದ್ದೇಶಕ್ಕಾಗಿ ಅಥವಾ ಯಾವುದೇ ತುರ್ತಿನ ಸಂದರ್ಭದಲ್ಲಿ ಅಥವಾ ಸೌಲಭ್ಯವನ್ನು ಅಮಾನತುಗೊಳಿಸುವ ಅಥವಾ ನಿಲ್ಲಿಸುವ ಆವಶ್ಯಕತೆ ಇರುವ ಸುರಕ್ಷತೆಯ ಕಾರಣಗಳಿಗಾಗಿ, ಪೂರ್ವ ಸೂಚನೆ ನೀಡದೆ ಸೌಲಭ್ಯವನ್ನು ಅಮಾನತುಗೊಳಿಸಬಹುದು.

**ಐ. ಇಂಡೆಮ್ನಿಟಿ**

1. ಯಸ್ ಬ್ಯಾಂಕ್, ಉಪಯೋಗಿಸುವವರಿಗೆ ಸೌಲಭ್ಯವನ್ನು ಒದಗಿಸುವುದನ್ನು ಪರಿಗಣಿಸಿ ಉಪಯೋಗಿಸುವವರು ತನ್ನ ಸ್ವಂತ ವೆಚ್ಚದಲ್ಲಿ ಹಿಂತೆಗೆದುಕೊಳ್ಳಲಾಗಂತೆ ಮತ್ತು ಬೇಷರತ್ತಾಗಿ ಯಸ್ ಬ್ಯಾಂಕ್ ಮತ್ತು ಅದರ ನಿರ್ದೇಶಕರು, ಅಧಿಕಾರಿಗಳು, ಮಾಲಕರು, ಏಜೆಂಟರು, ಸಹ–ಬ್ರಾಂಡರರು ಅಥವಾ ಇತರ ಪಾಲುದಾರರು, ಸಿಬ್ಬಂದಿಗಳು, ಮಾಹಿತಿ ಒದಗಿಸುವವರು, ಲೈಸನ್ಸರ್, ಲೈಸನ್ಸಿಗಳು, ಸಲಹೆಗಾರರು, ಗುತ್ತಿಗೆದಾರರು ಮತ್ತು ಅನ್ವಯವಾಗುವ ಇತರ ಮೂರನೇ ಪಾರ್ಟಿಗಳು (ಜೊತೆಯಾಗಿ ''ಇಂಡೆಮ್ನಿಫೈಡ್ ಪಾರ್ಟಿಗಳು) ಇವರನ್ನು ಈ ಮುಂದಿನವುಗಳನ್ನೊಳಗೊಂಡು, ಇವುಗಳಿಗೆ ಸಂಬಂಧಿಸಿ ಅಥವಾ ಇವುಗಳಿಂದಾಗುವ ಸಕಾರಣವಾದ ಅಟರ್ನಿ ಶುಲ್ಕಗಳು ಮತ್ತು ವೆಚ್ಚಗಳು ಅಥವಾ ಅನುಭವಿಸಿದ ಅಥವಾ ಅನುಭವಿಸುವ ಸಾಧ್ಯತೆ ಇರುವವುಗಳನ್ನೊಳಗೊಂಡು ಯಾವುದೇ ಮತ್ತು ಎಲ್ಲಾ ನಷ್ಟಗಳು, ಹಾನಿಗಳು, ಕ್ಲೈಮ್‌ಗಳು, ಬೇಡಿಕೆಗಳು, ಕ್ರಮದ ಕಾರಣಗಳು, ಡೆಬ್ಟ್ ಅಥವಾ ಬಾಧ್ಯತೆಗಾಗಿ ಯಸ್ ಬ್ಯಾಂಕ್‌ನ್ನು ಇಂಡೆಮ್ನಿಫೈಡ್ ಮಾಡಲು, ಸಂರಕ್ಷಿಸಲು ಮತ್ತು ಹಾನಿ ಮಾಡದಿರಲು ಒಪ್ಪಿಕೊಳ್ಳುತ್ತಾರೆ (i) ಇಲ್ಲಿ ನಮೂದಿಸಲಾದ ಯಾವುದೇ ನಿಯಮ ಮತ್ತು ನಿಬಂಧನೆಗಳು ಅಥವಾ ಯಸ್ ಬ್ಯಾಂಕ್‌ನಿಂದ ಸಮಯ ಸಮಯಕ್ಕೆ ನಿರ್ದಿಷ್ಟಪಡಿಸಲಾಗುವ ಇತರ ಯಾವುದೇ ಹೆಚ್ಚುವರಿ ನಿಯಮ ಮತ್ತು ನಿಬಂಧನೆಗಳು (ii) ಸೌಲಭ್ಯಗಳ ಉಪಯೋಗದಿಂದ ಅಥವಾ ಅದಕ್ಕೆ ಸಂಬಂಧಿಸಿ ಉಪಯೋಗಿಸುವವರ ಕ್ರಮಗಳು ಅಥವಾ ಲೋಪಗಳ ಕಾರಣ ಇಂಡೆಮ್ನಿಫೈಡ್ ಮಾಡಲಾರ ಪಾರ್ಟಿಗಳ ವಿರುದ್ಧ ಯಾವುದೇ ಕ್ಲೈಮ್, ಬೇಡಿಕೆ, ತಕರಾರು ಅಥವಾ ಕ್ರಮದ ಉಲ್ಲಂಘನೆ ಅಥವಾ ಅವನ್ನು ಪಾಲಿಸದಿರುವುದು ಮತ್ತು (iii) ಉಪಯೋಗಿಸುವವರಿಂದ ಮೂರನೇ ಪಾರ್ಟಿಯ ಯಾವುದೇ ಕಾನೂನು ಅಥವಾ ಹಕ್ಕುಗಳ ಯಾವುದೇ ನಿರ್ಲಕ್ಷ್ಯ ಅಥವಾ ಉಲ್ಲಂಘನೆ ಅಥವಾ ಉಲ್ಲಂಘನೆಯ ಆರೋಪ.

2. ಯಸ್ ಬ್ಯಾಂಕ್‌ನಿಂದ ಭಾಗಶ: ಅಥವಾ ಪೂರ್ಣತ: ಹಿಂತೆಗೆದುಕೊಂಡರೂ ಈ ಇಂಡೆಮ್ನಿಟಿಯು ಊರ್ಜಿತವಾಗಿರುತ್ತದೆ ಮತ್ತು ಅಸ್ತಿತ್ವದಲ್ಲಿರುತ್ತದೆ ಮತ್ತು ಉಪಯೋಗಿಸುವವರಿಗೆ ಅನ್ವಯವಾಗುತ್ತದೆ ಎಂದು ಉಪಯೋಗಿಸುವವರು ಒಪ್ಪಿಕೊಳ್ಳುತ್ತಾರೆ ಮತ್ತು ದೃಢೀಕರಿಸುತ್ತಾರೆ.

3. ಈ ಇಂಡೆಮ್ನಿಟಿಯು ಮುಂದುವರಿಯುತ್ತಿರುವ ಇಂಡೆಮ್ನಿಟಿಯಾಗಿದೆ ಮತ್ತು ಸೌಲಭ್ಯಗಳು ಕೊನೆಗೊಂಡರೂ ಅಥವಾ ಅದರ ಅವಧಿ ಮುಗಿದರೂ ಊರ್ಜಿತವಾಗಿರುತ್ತದೆ ಮತ್ತು ಅಸ್ತಿತ್ವದಲ್ಲಿರುತ್ತದೆ ಮತ್ತು ಉಪಯೋಗಿಸುವವರಿಗೆ ಅನ್ವಯವಾಗಿರುತ್ತದೆ ಎಂದು ಉಪಯೋಗಿಸುವವರು ಒಪ್ಪಿಕೊಳ್ಳುತ್ತಾರೆ ಮತ್ತು ದೃಢೀಕರಿಸುತ್ತಾರೆ.

4. ಉಪಯೋಗಿಸುವವರು ಇಂಡೆಮ್ನಿಫೈ ಮಾಡಲಾದ ಪಾರ್ಟಿಗಳಿಗೆ ಇಂತಹ ನಷ್ಟ, ವೆಚ್ಚ ಮತ್ತು ಕ್ಲೈಮ್ ಅಥವಾ ಖರ್ಚುಗಳ ವಿರುದ್ಧ ಅವು ಆಗಿರದಿದ್ದರೂ ಅಥವಾ ಸ್ವರೂಪದಲ್ಲಿ ಕಂಟಿಂಜೆಂಟ್ ಆಗಲ್ಲದಿದ್ದರೂ, ಇಂಡೆಮ್ನಿಫೈ ಮಾಡಲು ಸಾಕಾಗುತ್ತದೆ ಎಂದು ಇಂಡೆಮ್ನಿಫೈ ಮಾಡಲಾದ ಪಾರ್ಟಿಗಳಿಂದ ನಿರ್ಧರಿಸಬಹುದಾದ ಇಂತಹ ಮೊತ್ತವನ್ನು ಪಾವತಿಸಲು ಒಪ್ಪಿಕೊಳ್ಳುತ್ತಾರೆ ಮತ್ತು ಸ್ವೀಕರಿಸುತ್ತಾರೆ.

**ಜೆ. ಗೌಪ್ಯತೆ**

1. ಕಾನೂನಿನಿಂದ ಅನುಮತಿಸಿರದಷ್ಟರ ಮಟ್ಟಿಗೆ, ಉಪಯೋಗಿಸುವವರಿಗೆ ಸಂಬಂಧಿಸಿದ ಗೌಪ್ಯ ಮಾಹಿತಿಯನ್ನು ಅಥವಾ ಸೌಲಭ್ಯಗಳನ್ನು ಉಪಯೋಗಿಸಲು ಅಥವಾ ಪಡೆದುಕೊಳ್ಳಲು ಉಪಯೋಗಿಸುವವರಿಂದ ನೀಡಲಾದ ಇತರ ಯಾವುದೇ ಮಾಹಿತಿಯನ್ನು ಮತ್ತು ತನ್ನ ಶಾಖೆಗಳು, ಪ್ರತಿನಿಧಿ ಕಛೇರಿಗಳು, ಸಹಯೋಗಿಗಳು, ಪ್ರತಿನಿಧಿಗಳು, ಲೆಕ್ಕ ಪರಿಶೋಧಕರು ಮತ್ತು ಯಸ್ ಬ್ಯಾಂಕ್‌ನಿಂದ ಆಯ್ಕೆ ಮಾಡಲಾಗಿದ್ದು ಎಲ್ಲಿಯೂ ಇರುವ ಮಾರನೆ ಪಾರ್ಟಿಗಳ ನಡುವೆ ವರ್ಗಾಯಿಸಲು ಯಸ್ ಬ್ಯಾಂಕ್ ಅರ್ಹವಾಗಿದೆ.

2. ಯಸ್ ಬ್ಯಾಂಕ್ ಉಪಯೋಗಿಸುವವರಿಗೆ ಸಂಬಂಧಿಸಿ ತನಗೆ ತಿಳಿದಿರುವ ಮತ್ತು ಯಸ್ ಬ್ಯಾಂಕ್ ಹೊಂದಿರುವ ಯಾವುದೇ ಮತ್ತು ಎಲ್ಲಾ ಮಾಹಿತಿಯನ್ನು ಯಾವುದೇ ಸಮಯದಲ್ಲಿ ತನಗೆ ಸೂಕ್ತವೆಂದು ತಿಳಿದಂತೆ ಇತರ ಯಾವುದೇ ಬ್ಯಾಂಕ್‌ಗೆ ಅಥವಾ ಸಂಸ್ಥೆ ಅಥವಾ ವಿತ್ತ ಸಂಸ್ಥೆ ಅಥವಾ ಇತರ ಮಂಡಳಿಗೆ ಹೊರಗೆಡಹಲು ಯಸ್ ಬ್ಯಾಂಕ್ ಅರ್ಹವಾಗಿದೆ.

3. ಈ ಖಂಡವು ಯಸ್ ಬ್ಯಾಂಕ್‌ನಿಂದ ಉಪಯೋಗಿಸುವವರಿಗೆ ನೀಡಲಾದ ಸೌಲಭ್ಯಗಳ ಕೊನೆಗೊಳಿಸುವಿಕೆ ಮತ್ತು ಅವಧಿ ಮುಗಿಯುವಿಕೆಯನ್ನು ಸರ್ವೈವ್ ಮಾಡುತ್ತದೆ.

**ಕೆ. ಅನಂಗೀಕಾರಗಳು**

1. ಈ ಮುಂದಿನ ಪ್ರಸಂಗದಲ್ಲಿ ಯಸ್ ಬ್ಯಾಂಕ್ ಯಾವುದೇ ಅಥವಾ ಎಲ್ಲಾ ಬಾಧ್ಯತೆಯಿಂದ ಮುಕ್ತವಾಗಿರುತ್ತದೆ (i) ಉಪಯೋಗಿಸುವವರು ಆವಶ್ಯಕ ಭೌಗೋಳಿಕ ರೇಂಜ್‌ನಲ್ಲಿ ಇಲ್ಲದಿರುವುದನೊಳ್ಳಗೊಂಡು ಆದರೆ ಇದಕ್ಕೆ ಮಾತ್ರ ಸೀಮಿತಗೊಳ್ಳದೆ ಅಥವಾ ನೈಸರ್ಗಿಕ ವಿಕೋಪಗಳು ಅಥವಾ ಇತರ ಯಾವುದೇ ಕಾನೂನು ಪ್ರಕಾರದ ನಿರ್ಬಂಧಗಳು ಅಥವಾ ದೂರಸಂಪರ್ಕದಲ್ಲಿ ಯಾವುದೇ ತಾಂತ್ರಿಕ ವ್ಯತ್ಯಯಗಳು ಅಥವಾ ಯಸ್ ಬ್ಯಾಂಕ್‌ನ ವಾಸ್ತವಿಕ ನಿಯಂತ್ರಣಕ್ಕೆ ಹೊರತಾದ ಇತರ ಯಾವುದೇ ಕಾರಣಗಳನ್ನೊಳಗೊಂಡು, ಅನಿವಾರ್ಯ ನಿರ್ಬಂಧದ ಪರಿಸ್ಥಿತಿಗಳ ಕಾರಣ ಸೌಲಭ್ಯವನ್ನು ಬಳಸಲು ವಿಫಲರಾದಲ್ಲಿ (ii) ಈ ಮೇಲೆ ನಮೂದಿಸಲಾದ ಕಾರಣಗಳಿಂದಾಗಿ ಉಪಯೋಗಿಸುವವರು ಅಥವಾ ಯಾರೇ ವ್ಯಕ್ತಿಯಿಂದ ಸೌಲಭ್ಯದ ಯಾವುದೇ ಪ್ರಮಾದದಿಂದ ನೇರವಾದ ಅಥವಾ ಪರೋಕ್ಷ ನಷ್ಟದಿಂದಾಗಿ ಯಾವುದೇ ಪ್ರಕಾರದ ಬಾಧ್ಯತೆಗಳು (iii) ಸಂಸ್ಕರಿಸುವ ಅಥವಾ ವರ್ಗಾವಣೆಯ ಕಾಲಾವಧಿಯಲ್ಲಿ ಗೌಪ್ಯತೆಯ ಯಾವುದೇ ನಷ್ಟ ಅಥವಾ ಇತರ ಯಾರೇ ವ್ಯಕ್ತಿಯಿಂದ ಯಾವುದೇ ಅನಧಿಕೃತ ತಲುಪುವಿಕೆ ಅಥವಾ ಗೌಪ್ಯತೆಯ ಉಲ್ಲಂಘನೆ (iv) ಸೇವೆ ಒದಗಿಸುವವರಿಂದ ಅಥವಾ ಯಾರೇ ಮೂರನೇ ಪಾರ್ಟಿಯಿಂದ ಸೌಲಭ್ಯಗಳ ಮೇಲೆ ಪರಿಣಾಮ ಬೀರುವ ಯಾವುದೇ ಪ್ರಮಾದ ಅಥವಾ ವೈಪಲ್ಯ.

2. ಯಸ್ ಬ್ಯಾಂಕ್ ಸೌಲಭ್ಯಗಳಿಗೆ ಸಂಬಂಧಿಸಿ ಅಥವಾ ಅದರಿಂದ ಉಂಟಾಗುವ, ಇಂತಹ ಯಾವುದೇ ಸೇವೆ ಒದಗಿಸುವವರಿಂದ ಅಥವಾ ಯಾರೇ ಮೂರನೇ ಪಾರ್ಟಿಯಿಂದ ಒದಗಿಸಲಾದ ಸೇವೆಯ ಗುಣಮಟ್ಟದ ಬಗ್ಗೆ ಸ್ಪಷ್ಟವಾದ ಅಥವಾ ಅಂತಹ ಅರ್ಥ ಬರುವ ಯಾವುದೇ ವಾರಂಟಿಯನ್ನು ನೀಡುವುದಿಲ್ಲ.

3. ಎಪ್ಲಿಕೇಶನ್‌ನ ಮೂಲಕ ಉಪಯೋಗಿಸುವವರಿಂದ ಹೊಸ ಕ್ರೆಡಿಟ್ ಕಾರ್ಡ್ ಅಥವಾ ಟ್ರಾವೆಲ್ ಕಾರ್ಡ್‌ಗಾಗಿ ಎಲ್ಲಾ ಕೋರಿಕೆಗಳು ಯಸ್ ಬ್ಯಾಂಕ್‌ನ ಸಂಪೂರ್ಣ ವಿವೇಚನೆಗೆ ಒಳಪಟ್ಟಿದೆ. ಹೊಸ ಕ್ರೆಡಿಟ್ ಕಾರ್ಡ್ ಅಥವಾ ಟ್ರಾವೆಲ್ ಕಾರ್ಡ್‌ಗೆ ಕೋರಿಕೆ ಮಾಡುವುದು ಎಂದರೆ ಯಸ್ ಬ್ಯಾಂಕ್‌ನ ಸ್ವೀಕೃತಿ ಎಂದಾಗುವುದಿಲ್ಲ ಎಂದು ಉಪಯೋಗಿಸುವವರು ಸ್ವೀಕರಿಸುತ್ತಾರೆ ಮತ್ತು ದೃಢೀಕರಿಸುತ್ತಾರೆ. ಉಪಯೋಗಿಸುವವರಿಂದ ಯಾವುದೇ ಕೋರಿಕೆಯ ಸ್ವೀಕೃತಿಯು ಇಂತಹ ಕ್ರೆಡಿಟ್ ಕಾರ್ಡ್ ಅಥವಾ ಟ್ರಾವೆಲ್ ಕಾರ್ಡ್‌ಗಾಗಿ ಯಸ್ ಬ್ಯಾಂಕ್‌ನಿಂದ ನಿರ್ದಿಷ್ಟಪಡಿಸಲಾದ ನಿಯಮ ಮತ್ತು ನಿಬಂಧನೆಗಳ ಪಾಲನೆಗೆ ಒಳಪಟ್ಟಿದೆ.

4. ಯಸ್ ಬ್ಯಾಂಕ್ ಸೌಲಭ್ಯಗಳ ಬಗ್ಗೆ ಎಪ್ಲಿಕೇಶನ್‌ನ ಮೂಲಕ ಒಂದೋ ವೈಯಕ್ತಿಕ ಅಥವಾ ಅನ್ಯಥಾ ವರ್ಗಾಯಿಸಲಾದ ಸಂದೇಶಗಳು ಅಥವಾ ಸೂಚನೆಗಳ ಗೌಪ್ಯತೆ ಅಥವಾ ಸುರಕ್ಷತೆಯ ಕುರಿತು ವಾರಂಟಿ ನೀಡುವುದಿಲ್ಲ.

5. ಯಸ್ ಬ್ಯಾಂಕ್ ಸಿಸ್ಟಮ್ ಮತ್ತು ನೆಟ್‌ವರ್ಕ್ ಅಥವಾ ಅವುಗಳ ಕೆಲಸ ಅಥವಾ ಕಾರ್ಯಾಚರಣೆ ಅಥವಾ ಯಾವುದೇ ರೀತಿಯಲ್ಲಿ ಉಪಯೋಗಿಸುವವರಿಂದ ಅಥವಾ ಯಾವನೇ ವ್ಯಕ್ತಿಯಿಂದ ಸೌಲಭ್ಯಗಳಿಗೆ ಸಂಬಂಧಿಸಿ ಅಥವಾ ಅದರ ಕಾರಣ ಅನುಭವಿಸಲಾದ ಯಾವುದೇ ರೀತಿಯ ನಷ್ಟ ಅಥವಾ ಹಾನಿಗಾಗಿ ಯಾವುದೇ ವಾರಂಟಿಯನ್ನು ಅಥವಾ ಪ್ರತಿನಿಧೀಕರಣವನ್ನು ಮಾಡುವುದಿಲ್ಲ.

6. ಯಸ್ ಬ್ಯಾಂಕ್ ಮತ್ತು/ಅಥವಾ ಅದರ ನಿರ್ದೇಶಕರು ಮತ್ತು ಸಿಬ್ಬಂದಿಗಳು, ಏಜೆಂಟರು ಅಥವಾ ಕಾಂಟ್ರ್ಯಾಕ್ಟರು, ನೇರವಾದ, ಪರೋಕ್ಷವಾದ ಅಥವಾ ಪರಿಣಾಮದಿಂದಾದ ಅಥವಾ ಈ ಕರಿತಾದ ಯಾವುದೇ ನಷ್ಟಕ್ಕೆ ಬಾಧ್ಯರಲ್ಲ. ಇದರಲ್ಲಿ ಈ ಮುಂದಿನವುಗಳು ಒಳಗೊಂಡಿವೆ ಆದರೆ ಇವುಗಳಿಗೆ ಮಾತ್ರ ಸೀಮಿತಗೊಂಡಿಲ್ಲ: ಆದಾಯ, ಲಾಭ, ವ್ಯಾಪಾರ, ಕಾಂಟ್ರ್ಯಾಕ್ಟ್‌ಗಳು, ನಿರೀಕ್ಷಿಕ ಉಳಿತಾಯಗಳು ಅಥವಾ ಗುಡ್‌ವಿಲ್‌ನಲ್ಲಿ ನಷ್ಟ ಅಥವಾ ಯಾವುದೇ ಉಪಕರಣದ ಅಥವಾ

ಮೌಲ್ಯದ ನಷ್ಟ, ಇದರಲ್ಲಿ ಇವು ಒಳಗೊಂಡಿವೆ: ಉಪಯೋಗಿಸುವವರಿಂದ ಅಥವಾ ಯಾರೇ ವ್ಯಕ್ತಿಯಿಂದ ಸಾಫ್ಟ್‌ವೇರ್, ಮುಂಗಾಣ ಬಹುದಾದ ಅಥವಾ ಹಾಗಿಲ್ಲದೆ ಅನುಭವಿಸಿದ್ದು ಅಥವಾ ಕೋರಿಕೆಯನ್ನು ಪಡೆಯುವಲ್ಲಿ ಮತ್ತು ಸಂಸ್ಕರಿಸುವಲ್ಲಿ ಯಸ್ ಬ್ಯಾಂಕ್‌ನಿಂದಾದ ಯಾವುದೇ ವಿಳಂಬ, ತಡೆ, ಅಮಾನತು, ಸೊಲ್ಯೂಷನ್ ಅಥವಾ ದೋಷಗಳು ಮತ್ತು ಪ್ರತಿಕ್ರಿಯೆಗಳನ್ನು ಫಾರ್ಮುಲೇಟ್ ಮಾಡುವುದು ಮತ್ತು ಮರಳಿಸುವುದು ಅಥವಾ ಯಾವುದೇ ಮಾಹಿತಿ ಅಥವಾ ಸಂದೇಶವನ್ನು ಉಪಯೋಗಿಸುವವರ ದೂರ ಸಂಪರ್ಕ ಉಪಕರಣಕ್ಕೆ ಅಥವಾ ಅವರಿಂದ ವರ್ಗಾಯಿಸುವಲ್ಲಿ ಯಾವುದೇ ವೈಫಲ್ಯ, ವಿಳಂಬ, ತಡೆ, ಅಮಾನತು, ನಿರ್ಬಂಧ ಅಥವಾ ಡೋಷಗಳು ಮತ್ತು ಯಾವುದೇ ಸೇವೆ ಒದಗಿಸುವವರ ನೆಟ್‌ವರ್ಕ್ ಮತ್ತು ಯಸ್ ಬ್ಯಾಂಕ್ ಸಿಸ್ಟಮ್ ಅಥವಾ ಉಪಯೋಗಿಸುವವರ ದೂರಸಂಪರ್ಕ ಉಪಕರಣದ ಯಾವುದೇ ನಿಷ್ಕ್ರಿಯತೆ, ತಡೆ ಅಮಾನತು ಅಥವಾ ವೈಫಲ್ಯ, ಯಸ್ ಬ್ಯಾಂಕ್ ಸಿಸ್ಟಮ್ ಅಥವಾ ಯಾವುದೇ ಸೇವೆ ಒದಗಿಸುವವರ ಮತ್ತು/ಅಥವಾ ಸೌಲಭ್ಯಗಳನ್ನು ಒದಗಿಸಲು ಆವಶ್ಯಕವಾದಂತೆ ಇಂತಹ ಸೇವೆಗಳನ್ನು ಒದಗಿಸುವ ಮೂರದೇ ಪಾರ್ಟಿ.

7. ಇಲ್ಲಿ ನಮೂದಿಸಲಾದ ನಿಯಮ ಮತ್ತು ನಿಬಂಧನೆಗಳಿಗೆ ವಿರುದ್ಧವಾಗಿ ಯಾವುದನ್ನೂ ಪರಿಗಣಿಸದೆ, ಯಸ್ ಬ್ಯಾಂಕ್, ಉಪಯೋಗಿಸುವವರು ಮತ್ತು ಸೆಲ್ಯೂಲರ್ ಸೇವೆಗಳನ್ನು ಒದಗಿಸುವವರು ಅಥವಾ ಯಾರೇ ಮೂರನೇ ಪಾರ್ಟಿ ಸೇವೆ ಒದಗಿಸುವವರ (ಅವರ ಪರವಾಗಿ ಯಸ್ ಬ್ಯಾಂಕ್‌ನಿಂದ ನಿಯುಕ್ತಿಗೊಳಿಸಲಾದವರು ಅಥವಾ ಅನ್ಯಥಾ) ನಡುವಿನ ಯಾವುದೇ ತರಕಾರುಗಳಲ್ಲಿ ಯಸ್ ಬ್ಯಾಂಕ್‌ನ್ನು ಒಳಪಡಿಸುವಂತಿಲ್ಲ ಅಥವಾ ಉಪಯೋಗಿಸುವವರಿಗೆ ಬಾಧ್ಯರಲ್ಲ.

8. ವೈಯಕ್ತಿಕ ಅಥವಾ ಉಪಯೋಗಿಸುವವರ ನಿರ್ದೇಶನಗಳನ್ನು ಕಾರ್ಯಗತಗೊಳಿಸಲು ಸೌಲಭ್ಯದ ಮೂಲಕ ಕಳುಹಿಸುತ್ತಿರುವ ಖಾತೆಯ ಮಾಹಿತಿಯ ಗೌಪ್ಯತೆ, ರಹಸ್ಯ ಮತ್ತು ಸುರಕ್ಷತೆಗಾಗಿ ಯಸ್ ಬ್ಯಾಂಕ್‌ನ್ನು ಜವಾಬ್ದಾರರನ್ನಾಗಿಸುವಂತಿಲ್ಲ.

9. ಕಾನೂನುಬದ್ಧ ನಿರ್ದೇಶನಗಳು, ಅಂಕಿ ಅಂಶಾತ್ಮಕ ವಿಶ್ಲೇಷಣೆ ಅಥವಾ ಕ್ರೆಡಿಟ್ ರೇಟಿಂಗ್‌ನ ಬದ್ಧತೆಗಾಗಿ ಯಾವುದೇ ದೂರ ಸಂಪರ್ಕ ಅಥವಾ ಇಲೆಕ್ಟ್ರಾನಿಕ್ ಕ್ಲಿಯರಿಂಗ್ ನೆಟ್‌ವರ್ಕ್‌ನಲ್ಲಿ ಭಾಗವಹಿಸುವಿಕೆಯನ್ನೊಳಗೊಂಡು ಆದರೆ ಇವುಗಳಿಗೆ ಮಾತ್ರ ಸೀಮಿತಗೊಳ್ಳದೆ ಯಾವುದೇ ಕಾರಣಕ್ಕಾಗಿ ಯಸ್ ಬ್ಯಾಂಕ್‌ನಿಂದ ಯಾರೇ ಮೂರನೇ ಪಾರ್ಟಿಗೆ ವೈಯಕ್ತಿಕ ಮಾಹಿತಿಯ ಹೊರಗೆಡಹುವಿಕೆಯ ಕಾರಣ ಉಪಯೋಗಿಸುವವರಿಂದ ಅನುಭವಿಸಲಾದ ಯಾವುದೇ ನಷ್ಟಕ್ಕೆ ಯಸ್ ಬ್ಯಾಂಕ್ ಬಾಧ್ಯರಾಗುವುದಿಲ್ಲ.

**ಎಲ್. ಉಪ-ಗುತ್ತಿಗೆ ನೀಡುವುದು**

1. ಯಸ್ ಬ್ಯಾಂಕ್ ಸೌಲಭ್ಯಗಳಡಿಯಲ್ಲಿ ತನ್ನ ಬಾಧ್ಯತೆಗಳ ಕಾರ್ಯಾಚರಣೆಯ ಉಪ ಗುತ್ತಿಗೆಯನ್ನು ಉಪಯೋಗಿಸುವವರಿಗೆ ಯಾವುದೇ ಸೂಚನೆ ಅಥವಾ ನೋಟೀಸು ನೀಡದೆ ಅಥವಾ ಅವರ ಸಮ್ಮತಿ ಪಡೆಯದೆ ಯಾರೇ ಮೂರನೇ ಪಾರ್ಟಿ ಅಥವಾ ಸ್ವತಂತ್ರ ಗುತ್ತಿಗೆದಾರರಿಗೆ ನೀಡಬಹುದು.

2. ಈ ನಿಯಮ ಮತ್ತು ನಿಬಂಧನೆಗಳಲ್ಲಿನ ಯಾವುದೂ ಯಸ್ ಬ್ಯಾಂಕ್ ಮತ್ತು ಉಪ-ಗುತ್ತಿಗೆದಾರರು ಅಥವಾ ಸ್ವತಂತ್ರ ಸೇವೆಯನ್ನು ಒದಗಿಸುವವರ ನಡುವಿನ ಗುತ್ತಿಗೆಯ ಸಂಬಂಧವನ್ನು ಸೃಷ್ಟಿಪುದಕ್ಕಾಗಿ ಎಂದು ಅಥವಾ ಉಪ-ಗುತ್ತಿಗೆದಾರರ ಅಥವಾ ಸ್ವತಂತ್ರ ಸೇವೆ ಒದಗಿಸುವವರಿಂದ ಬರಬೇಕಾದ ಯಾವುದೇ ಹಣವನ್ನು ಪಾತಿಸಲು ಯಸ್‌ಬ್ಯಾಂಕ್‌ನ ಬಾಧ್ಯತೆ ಎಂದು ಪರಿಗಣಿಸುವಂತಿಲ್ಲ.

**ಎಮ್. ಬೇರ್ಪಡಿಸುವಿಕೆ**

1. ಈ ದಸ್ತಾವೇಜಿನ ಯಾವುದೇ ನಿಯಮ ಅಥವಾ ಪ್ರಾವಧಾನಗಳನ್ನು ಅರ್ಹ ವ್ಯಾಪ್ತಿ ಹೊಂದಿರುವ ನ್ಯಾಯಾಲಯವು ಅನೂರ್ಜಿತ ಎಂದು ಘೋಷಿಸಿದರೆ, ಈ ಪರ್ಚೇಸ್ ಆರ್ಡರ್‌ನ ಉಳಿದ ನಿಯಮಗಳು ಮತ್ತು ಪ್ರಾವಧಾನಗಳು ಪರಿಣಾಮಗೊಳ್ಳುವುದಿಲ್ಲ ಮತ್ತು ಸಂಪೂರ್ಣವಾಗಿ ಜಾರಿಯಲ್ಲಿರುತ್ತವೆ ಮತ್ತು ಪರಿಣಾಮ ಹೊಂದಿರುತ್ತವೆ.

**ಎನ್. ಮೂರನೇ ಪಾರ್ಟಿ ಲಾಭಾರ್ಥಿಗಳು**

1. ಇಲ್ಲಿ ನಿರ್ದಿಷ್ಟವಾಗಿ ಹೇಳಿರದದಿದ್ದರೆ ಅಥವಾ ಉಲ್ಲೇಖಿಸದಿದ್ದರೆ, ಇಲ್ಲಿ ಒಳಗೊಂಡಿರುವ ಅಥವಾ ಅರ್ಥ ಹೊಂದಿರುವ ಯಾವುದೂ, ಉಪಯೋಗಿಸುವವರ ಹೊರತಾಗಿ ಯಾರೇ ವ್ಯಕ್ತಿ ಅಥವಾ ಸಂಸ್ಥೆಗೆ ಯಾವುದೇ ಹಕ್ಕನ್ನು ತಿಳಿಸುವ ಉದ್ದೇಶ ಹೊಂದಿಲ್ಲ ಮತ್ತು ಹಾಗೆಂದು ತಿಳಿಯಬಾರದು.

**ಓ. ಶುಲ್ಕಗಳು ಮತ್ತು ಗ್ರಾಹಕ ಬೆಂಬಲ**

1. ಉಪಯೋಗಿಸುವವರು ಯಸ್ ಬ್ಯಾಂಕ್ ವಾಲೆಟ್‌ನಿಂದ ಯಾವುದೇ ಯಸ್ ಬ್ಯಾಂಕ್ ಖಾತೆಗೆ ಯಾವುದೇ ಮೊತ್ತವನ್ನು ವರ್ಗಾಯಿಸಿದಾಗ ಯಸ್ ಬ್ಯಾಂಕ್, ಉಪಯೋಗಿಸುವವರಿಗೆ ಶುಲ್ಕಗಳನ್ನು ವಿಧಿಸುತ್ತದೆ.
2. ಯಸ್ ಪೇ ವಾಲೆಟ್‌ಗೆ ಸಂಬಂಧಿಸಿ ಹೆಚ್ಚಿನ ಮಾಹಿತಿಗಾಗಿ ಉಪಯೋಗಿಸುವವರು www.yesbank.in ಇಲ್ಲಿಗೆ ಅಥವಾ yespay.co.in ಇಲ್ಲಿಗೆ ಭೇಟಿ ನೀಡಬಹುದು.
3. ಯಾವುದೇ ಪ್ರಶ್ನೆಗಳು/ದೂರುಗಳಿಗಾಗಿಉಪಯೋಗಿಸುವವರು ಯಸ್ ಬ್ಯಾಂಕ್‌ನ ಟೋಲ್ ಫ್ರೀ ನಂ. 1800 2000 ಇದನ್ನು ಸಂಪರ್ಕಿಸಬಹುದು ಅಥವಾ yestouch@yesbank.in ಇಲ್ಲಿಗೆ ಬರೆಯಬಹುದು.
4. ಒಂದು ವೇಳೆ ಒದಗಿಸಲಾದ ಸಮಾಧಾನವು ನಿಮ್ಮ ನಿರೀಕ್ಷೆಗಳಂತೆ ಇರದಿದ್ದರೆ, ಉಪಯೋಗಿಸುವವರು head.grievanceredressal@yesbank.in ಇಲ್ಲಿ ದೂರು ನಿವಾರಣಾ ಅಧಿಕಾರಿಯವರನ್ನು ಸಂಪರ್ಕಿಸಬಹುದು. ಒಂದು ವೇಳೆ ದೂರು ನಿವಾರಣಾ ಅಧಿಕಾರಿಯವರಿಂದ ಒದಗಿಸಲಾದ ಸಮಾಧಾನವು ತೃಪ್ತಿಕರವಾಗಿರದಿದ್ದರೆ, ಉಪಯೋಗಿಸುವವರು principal.nodalofficer@yesbank.in ಇಲ್ಲಿ ಮುಖ್ಯ ನೂಡಲ್ ಅಧಿಕಾರಿಯವರನ್ನು ಸಂಪರ್ಕಿಸಬಹುದು.
5. ಯಸ್ ಬ್ಯಾಂಕ್ ಇದು ಭಾರತೀಯ ರಿಸರ್ವ್ ಬ್ಯಾಂಕ್‌ನ ಬ್ಯಾಂಕಿಂಗ್ ಒಂಬುಡ್ಸ್‌ಮೇನ್ ಸ್ಕೀಮ್ 2006ರಡಿಯಲ್ಲಿ ಒಳಗೊಂಡಿದೆ ಎಂದು ಈ ಮೂಲಕ ಉಪಯೋಗಿಸುವವರಿಗೆ ತಿಳಿಸಲಾಗುತ್ತದೆ. ಈ ಸ್ಕೀಮ್‌ನಡಿಯಲ್ಲಿ, ಬ್ಯಾಂಕ್‌ನ ವಿರುದ್ಧ ಯಾವುದೇ ದೂರನ್ನು 30 ದಿನಗಳೊಳಗೆ ಪರಿಹರಿಸದಿದ್ದರೆ, ಅದನ್ನು ಸಂಬಂಧಪಟ್ಟ ನಗರದ ಬ್ಯಾಂಕಿಂಗ್ ಒಂಬುಡ್ಸ್‌ಮೇನ್‌ರಿಗೆ ಕಳುಹಿಸಬಹುದು. ಸಂಪರ್ಕ ವಿವರಗಳಿಗಾಗಿ ದಯವಿಟ್ಟು ಈ ಕೆಳಗಿನ ಲಿಂಕ್‌ನ್ನು ಅನುಸರಿಸಿರಿ: https://www.rbi.org.in/Scripts/bs_viewcontent.aspx?Id=164

**ಪಿ. ಅನ್ವಯವಾಗುವ ಕಾನೂನು ಮತ್ತು ವ್ಯಾಪ್ತಿ:**

1. ಇಲ್ಲಿ ನಮೂದಿಸಲಾದ ಎಲ್ಲಾ ಮತ್ತು ಸಮಯ ಸಮಯಕ್ಕೆ ಯಸ್ ಬ್ಯಾಂಕ್‌ನಿಂದ ತಿದ್ದುಪಡಿ ಮಾಡಲಾದ ಅಥವಾ ಪರಿವರ್ತಿಸಲಾದ ನಿಯಮ ಮತ್ತು ನಿಬಂಧನೆಗಳು ಮತ್ತು ಎಲ್ಲಾ ದೂರುಗಳು ಭಾರತದ ಕಾನೂನಿನಂತೆ ನಿರ್ವಹಿಸಲ್ಪಡುತ್ತವೆ.
2. ಅವುಗಳ ಉಲ್ಲಂಘನೆ, ಕೊನೆಗೊಳಿಸುವಿಕೆ ಅಥವಾ ಊರ್ಜಿತತೆಯನ್ನೊಳಗೊಂಡು ಇಲ್ಲಿ ನಮೂದಿಸಲಾದ ಮತ್ತು ಯಸ್ ಬ್ಯಾಂಕ್‌ನಿಂದ ಸಮಯ ಸಮಯಕ್ಕೆ ತಿದ್ದುಪಡಿ ಮಾಡಲಾದ ಅಥವಾ ಪರಿವರ್ತಿಸಾಲದ ಎಲ್ಲಾ ನಿಯಮ ಮತ್ತು ನಿಬಂಧನೆ ಯಾವುದೇ ಅಥವಾ ಎಲ್ಲಾ ತಕರಾರುಗಳು, ವಿವಾದಗಳು ಅಥವಾ ಕ್ಲೈಮ್ ವಿಶೇಷವಾಗಿ ಮುಂಬಯಿಯಲ್ಲಿ ನ್ಯಾಯಲಯಗಳ ವ್ಯಾಪ್ತಿಗೆ ಬರುತ್ತವೆ.

**ಉಪಯೋಗಿಸುವವರು ಈ ಮೇಲೆ ನಮೂದಿಸಲಾದ ನಿಯಮ ಮತ್ತು ನಿಬಂಧನೆಗಳನ್ನು ಓದಿದ್ದಾರೆ ಮತ್ತು ತಿಳಿದುಕೊಂಡಿದ್ದಾರೆ ಮತ್ತು ತನ್ನ ಸ್ವಂತ ಇಚ್ಛೆ, ಮಾಹಿತಿಪ್ರಾಪ್ತ ಸಮ್ಮತಿ ಮತ್ತು ಸಂಕಲ್ಪದಿಂದ ಎಪ್ಲಿಕೇಶನ್‌ನ ಮೂಲಕ ಸೌಲಭ್ಯಗಳನ್ನು ಪಡೆದುಕೊಳ್ಳಲು ಒಪ್ಪಿಕೊಳ್ಳುತ್ತಾರೆ.**